# ಲಹರಿ ಸಂವಾದ

ಸಂಪುಟ : ೧೭ ಸಂಚಿಕೆ : ೧೦
ಶಾಲಿವಾಹನ ಶಕ ೧೯೩೯, ಶ್ರೀ ಹೇಮಲಂಬಿ ನಾಮ ಸಂವತ್ಸರ, ಪುಷ್ಯ–ಫಾಲ್ಗುಣ

ಪುಟ ೧: ತಿಂಗಳ ಸುದ್ದಿ
ಪುಟ ೨: ಸಂಪಾದಕೀಯ, ಜನಸಾಮಾನ್ಯರಿಗೆ ಕಾನೂನು,
ಪುಟ ೩: ಅಂಕಣ, ಸುದ್ದಿ, ನ್ಯಾಯಾಲಯದ ಅಂಗಳದಿಂದ ಪುಟ ೪: ಸುದ್ದಿ

## ಕ್ರಿಮಿನಲ್ ಪ್ರಕರಣದ ರದ್ದತಿ : ಕೇಳಿದ ಮಾತ್ರಕ್ಕೆ ಕೊಡಲು ಸಾಧ್ಯ ಇಲ್ಲ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ ೪೮೨ ರಂತೆ ಕ್ರಿಮಿನಲ್ ಪ್ರಕರಣಗಳನ್ನು ಆರಂಭಿಕ ಹಂತದಲ್ಲಿಯೆ ರದ್ದು ಮಾಡಲು ಉಚ್ಚ ನ್ಯಾಯಾಲಯಕ್ಕಿರುವ ಅಧಿಕಾರ ಆಪಾದಿತ ಕೇಳಿದ ಮಾತ್ರಕ್ಕೆ ಚಲಾಯಿಸಲು ಸಾಧ್ಯ ಇಲ್ಲ ಎಂದಿದೆ ಸರ್ವೋಚ್ಚ ನ್ಯಾಯಾಲಯ. ಈ ಅಧಿಕಾರ ಚಲಾಯಿಸುವ ನ್ಯಾಯಾಲಯಗಳು ex debito justitia ಸಿದ್ಧಾಂತದಂತೆ ಕಾರ್ಯ ನಿರ್ವಹಿಸಲಾರವು ಎಂದೂ ಈ ತೀರ್ಪು ಸಾರಿದೆ. ex debito justitia ಸಿದ್ಧಾಂತ ಕೆಲ ಸಂದರ್ಭಗಳಲ್ಲಿ ವ್ಯಾಜ್ಯಕಾರ ಕೇಳಿದ ಮಾತ್ರಕ್ಕೆ ಅಂತಹ ಪರಿಹಾರ ಪಡೆಯಲು ಅರ್ಹ ಎನ್ನುತ್ತದೆ. ಈ ಸಿದ್ಧಾಂತ ಕಲಂ ೪೮೨ ರಂತೆ ದಾಖಲಿಸುವ ಪಿಟಿಶನ್ನಿಗೆ ಅನ್ವಯಿಸದು ಎಂದಿದೆ ಈ ತೀರ್ಪು.

ಕಾನೂನಿನಂತೆ ಈ ಮೇಲಿನ ಸಂಗತಿಯನ್ನು ಸ್ಪಷ್ಟಪಡಿಸಿಯೂ ವಾಸ್ತವಾಂಶಗಳನ್ನು ಗಮನಿಸಿ ಈ ತೀರ್ಪು ವರದಕ್ಷಿಣೆ ಕಿರುಕುಳ ಮತ್ತು ನಂಬಿಕೆ ದ್ರೋಹದ ಆಪಾದನೆ ಎದುರಿಸುತ್ತಿದ್ದ ಗಂಡನ ಕೋರಿಕೆಯಂತೆ ಹೆಂಡತಿಯ ದೂರಿನ ಪ್ರಕರಣವನ್ನು ರದ್ದುಪಡಿಸಿತು.

ಗಂಡನ ವಿರುದ್ಧ ಪೋಲೀಸರಿಗೆ ಪ್ರಥಮ ವರ್ತಮಾನ ನೀಡಿದ ಮಹಿಳೆಯ ಹೇಳಿಕೆಯಂತೆ ಪೋಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ತನಿಖೆಯ ನಂತರ ಗಂಡನ ವಿರುದ್ಧ ಮೇಲೆ ಹೇಳಲಾದ ಅಪರಾಧಗಳಿಗೆ ದೋಷಾರೋಪಣಾ ಪಟ್ಟಿಯನ್ನೂ ಸಲ್ಲಿಸಲಾಗಿತ್ತು. ಈ ಹಂತದಲ್ಲಿ ಗಂಡ ಉಚ್ಚ ನ್ಯಾಯಾಲಯದ ಬಾಗಿಲು ಬಡಿದು ಪ್ರಕರಣ ರದ್ದುಪಡಿಸಲು ಕೇಳಿಕೊಂಡಿದ್ದರು. ಆ ಪ್ರಯತ್ನ ವಿಫಲವಾದ ನಂತರ ಸರ್ವೋಚ್ಚ ನ್ಯಾಯಾಲಯಕ್ಕೆ ಬಂದಿದ್ದರು.

▶▶ ೪

## ಸುಳ್ಳು ಜಾತಿ ಪ್ರಮಾಣ ಪತ್ರ-ಸೌಲಭ್ಯಗಳು ರದ್ದಾಗಲೆ ಬೇಕು

ವ್ಯಕ್ತಿಯೊಬ್ಬ ಪಡೆದ ಜಾತಿ ಪ್ರಮಾಣ ಪತ್ರ ಸುಳ್ಳೆಂದು ರದ್ದಾದರೆ ಅದರಂತೆ ಪಡೆದ ಸೌಲಭ್ಯಗಳೂ ರದ್ದಾಗಲೆಬೇಕು, ಇದು ಸಹಜ ಪ್ರತಿಕ್ರಿಯೆ ಎಂದಿದೆ ಸರ್ವೋಚ್ಚ ನ್ಯಾಯಾಲಯ. ಸುಳ್ಳು ಜಾತಿ ಪ್ರಮಾಣ ಪತ್ರದ ಆಧಾರದ ಮೇಲೆ ಪಡೆದ ಸೌಲಭ್ಯ ಹುದ್ದೆಯೊಂದಕ್ಕೆ ನೇಮಕಾತಿ ಇರಬಹುದು ಅಥವಾ ಶೈಕ್ಷಣಿಕ ತರಗತಿಯೊಂದಕ್ಕೆ ಪಡೆದ ಸೇರ್ಪಡೆ ಇರಬಹುದು, ಅದು ರದ್ದಾಗುವುದು ಅನಿವಾರ್ಯ ಎಂದಿದೆ ನ್ಯಾಯಾಲಯದ ಈ ತ್ರಿಸದಸ್ಯ ಪೀಠ.

ಈ ತ್ರಿ ಸದಸ್ಯ ಪೀಠದ ತೀರ್ಪಿನಂತೆ ಇದೆ ನ್ಯಾಯಾಲಯದ ೨೦೧೨ರ ಕವಿತಾ ಸೋಳುಂಕೆ ತೀರ್ಪು ರದ್ದುಗೊಂಡಿದೆ. ಕವಿತಾ ಸೊಳುಂಕೆ ತಾವು 'ಹಲ್ಬಾ' ಅನುಸೂಚಿತ ಪಂಗಡದವರು ಎಂದು ಹೇಳಿ ಉದ್ಯೋಗ ಪಡೆದಿದ್ದರು. ಅವರು ಹಲ್ಬಾ ಅಲ್ಲ 'ಕೋಷ್ಠಿ' ಜಾತಿಯವರೆಂದು ಗೊತ್ತಾದ ನಂತರ ಅವರ ಜಾತಿ ಪ್ರಮಾಣ ಪತ್ರ ರದ್ದಾಗಿತ್ತು. ಹಾಗಿದ್ದೂ ಅವರನ್ನು ಕೆಲಸದಿಂದ ವಜಾ ಮಾಡಿದ ಕ್ರಮವನ್ನು ನ್ಯಾಯಾಲಯ ಒಪ್ಪಿರಲಿಲ್ಲ. ಅವರ ನೇಮಕಾತಿಯ ವಿಷಯ ಅಂತಿಮಗೊಂಡಿದೆ (attained finality) ಎಂದು ಹೇಳಿ ಅವರನ್ನು ಕೆಲಸದಿಂದ ವಜಾ ಮಾಡಿದ ಕ್ರಮವನ್ನು ರದ್ದುಪಡಿಸಿತ್ತು. ಈ ತೀರ್ಪನ್ನು ಸರ್ವೋಚ್ಚ ನ್ಯಾಯಾಲಯ ರದ್ದುಪಡಿಸಿದೆ.

ಈ ತ್ರಿ ಸದಸ್ಯ ಪೀಠದ ತೀರ್ಪು ಹೀಗೆ ಜಾತಿ ಪ್ರಮಾಣ ಪತ್ರ ರದ್ದಾಗುವುದರಿಂದ ಸಂಭವಿಸಬೇಕಾದ ಪರಿಣಾಮಗಳನ್ನು ಸಿವಿಲ್ ಸ್ವರೂಪದ್ದು ಮತ್ತು ಕ್ರಿಮಿನಲ್ ಸ್ವರೂಪದ್ದು ಎಂದು ವಿಂಗಡಿಸಿ ಇವೆರಡೂ ಒಂದಕ್ಕೊಂದು ಸಂಬಂಧ ಇಲ್ಲ ಎಂದಿದೆ. ಈ ತೀರ್ಪಿನಂತೆ ಪ್ರಮಾಣ ಪತ್ರ ರದ್ದಾದ ನಂತರ ಕೆಲಸ ಅಥವಾ ಕಾಲೇಜಿನ ಪ್ರವೇಶಾತಿಯನ್ನು ಕಳೆದುಕೊಳ್ಳುವುದು ಸಿವಿಲ್ ಪರಿಣಾಮ. ಇಂತಹ ಸೌಲಭ್ಯಗಳನ್ನು ರದ್ದುಪಡಿಸಲು ಅಪರಾಧಿಕ ಉದ್ದೇಶ (mens rea) ಇರುವುದನ್ನು ಸಾಬೀತುಪಡಿಸುವ ಅವಶ್ಯಕತೆ ಇಲ್ಲ, ಅದೇನಿದ್ದರೂ ಕ್ರಿಮಿನಲ್ ಪ್ರಕರಣ ಹೂಡಿದಾಗ ಮಾತ್ರ ಎಂದಿದೆ ನ್ಯಾಯಪೀಠ.

▶▶ ೩

## ನಿರ್ದಿಷ್ಟ ಪರಿಹಾರ ಅಧಿನಿಯಮದ ಡಿಕ್ರಿ: ಖರೀದಿದಾರನ ತನ್ನದಲ್ಲದ ತಪ್ಪಿಗೆ ಶಿಕ್ಷೆಯಿಲ್ಲ

ನಿರ್ದಿಷ್ಟ ಪರಿಹಾರ ಅಧಿನಿಯಮದಂತೆ ಪ್ರತಿವಾದಿ ವಾದಿಗೆ ಸ್ಥಿರಾಸ್ಥಿ ಮಾರಾಟ ಮಾಡಬೇಕೆಂದು ಡಿಕ್ರಿ ಪಡೆದ ಖರೀದಿದಾರನಿಗೆ ತನ್ನದಲ್ಲದ ತಪ್ಪಿಗೆ ಶಿಕ್ಷೆ ಕೊಟ್ಟು ಡಿಕ್ರಿಯ ಜಾರಿಯನ್ನು ತಡೆಯುವಂತಿಲ್ಲ ಎಂದಿದೆ ಸರ್ವೋಚ್ಚ ನ್ಯಾಯಾಲಯ. ತನ್ಮೂಲಕ ಖರೀದಿದಾರ – ಡಿಕ್ರಿ ಪಡೆದಾತ ಸಲ್ಲಿಸಿದ್ದ ಜಾರಿ ಪಿಟಿಶನ್ನಿನಂತೆ ಮಾರಾಟ ಪ್ರಕ್ರಿಯೆ ನಡೆಯಲಿ ಎಂದಿದೆ, ಅಂತಿಮ ನ್ಯಾಯಾಲಯ.

ಮಧ್ಯ ಪ್ರದೇಶದ ಉಚ್ಚ ನ್ಯಾಯಾಲಯು ಇಂತಹ ಡಿಕ್ರಿ ಪಡೆದಾತರೊಬ್ಬರು ಸಲ್ಲಿಸಿದ್ದ ಜಾರಿ (execution) ಪಿಟಿಶನ್ನನ್ನು ವಜಾ ಮಾಡಿತ್ತು– ಅವರು ಖರೀದಿ ಪತ್ರಕ್ಕೆ ಸ್ಟ್ಯಾಂಪ್ ಶುಲ್ಕ ಕೊಟ್ಟಿಲ್ಲ ಎಂಬ ಕಾರಣಕ್ಕೆ.

ಅಭಯ ಕುಮಾರ ಖರೀದಿದಾರರಾಗಿ ಮತ್ತು ರಾಂ ಮೋಹನ ಮಾರಾಟಗಾರರಾಗಿ ಸ್ಥಿರಾಸ್ತಿಯ ಮಾರಾಟಕ್ಕೆ ದಿನಾಂಕ ೧೯.೧೧.೧೯೯೫ ರಂದು ಕರಾರು ಪತ್ರವನ್ನು ಬರೆದರು. ತದನಂತರ

▶▶ ೪

## ಹಿಂದೂ ಮರಣ ಶಾಸನಕ್ಕೆ ಪ್ರೊಬೆಟ್ ಬೇಕಿಲ್ಲ, ಅದರೂ ಆಜ್ಞಾಪಿಸಬಹುದು

ಹಿಂದೂ ವ್ಯಕ್ತಿ ಬರೆದಿಟ್ಟ ಮರಣ ಶಾಸನ(ವಿಲ್)ವನ್ನು ನ್ಯಾಯಾಲಯದಿಂದ ಪ್ರೊಬೆಟ್ ಮಾಡಿಸುವ ಅಗತ್ಯ ಇಲ್ಲ. ಆದರೆ ಇಂತಹ ವಿಷಯದಲ್ಲಿ ನ್ಯಾಯಾಲಯಕ್ಕೆ ಅಧಿಕಾರ ವ್ಯಾಪ್ತಿ ಇಲ್ಲ ಎಂದು ತಿಳಿಯಬಾರದು, ಅಂತಹ ಸಂದರ್ಭದಲ್ಲಿಯೂ ಪ್ರೊಬೆಟ್‌ಗಾಗಿ ನ್ಯಾಯಾಲಯ ಆಜ್ಞಾಪಿಸಬಹುದಾಗಿದೆ ಎಂದು ಕರ್ನಾಟಕ ಉಚ್ಚ ನ್ಯಾಯಾಲಯ ಇತ್ತೀಚೆಗೆ ತೀರ್ಪಿತ್ತಿದೆ.

ಈ ತೀರ್ಪಿನಂತೆ ಅಂತಹ ವಿಲ್ಲುಗಳಿಗೆ ಪ್ರೊಬೆಟ್ ಬೇಕಿಲ್ಲ. ಅದರರ್ಥ ನ್ಯಾಯಾಲಯಕ್ಕೆ ಪ್ರೊಬೆಟ್ ಹೊರಡಿಸಲು ಅಧಿಕಾರ ವ್ಯಾಪ್ತಿ ಇಲ್ಲ ಎಂದಲ್ಲ. ಬದಲಾಗಿ ಪ್ರೊಬೆಟ್ ಬೇಕೊ ಬೇಡವೊ ಎಂಬುದು ಪಕ್ಷಗಾರರ ನಿರ್ಣಯಕ್ಕೆ ಬಿಟ್ಟ ವಿಷಯ. ಪ್ರೊಬೆಟ್ ಬೇಕಿಲ್ಲದಾಗಲೂ ಸಂಬಂಧಿಸಿದ ಪಕ್ಷಗಾರರು ಅದಕ್ಕೆ ಅರ್ಜಿ ಸಲ್ಲಿಸಿ ಪಡೆಯಲು ಸ್ವಾತಂತ್ರ ಉಳ್ಳವರಾಗಿದ್ದಾರೆ ಎಂದಿದೆ ಈ ತೀರ್ಪು.

ಪ್ರೊಬೆಟ್ ಒಂದು ನ್ಯಾಯಿಕ ಪ್ರಕ್ರಿಯೆ ಆಗಿದ್ದು ಮರಣ ಶಾಸನವನ್ನು ಜಾರಿಗೊಳಿಸುವ ಜವಾಬ್ದಾರಿ ಇರುವ ವ್ಯಕ್ತಿ (executor of Will) ಅಥವಾ ಅದರಂತೆ ಆಸ್ತಿ–ಪಾಸ್ತಿ ಪಡೆದ ವ್ಯಕ್ತಿ (legatee) ಉಯಿಲನ್ನು ನ್ಯಾಯಾಲಯದ ಮುಂದಿರಿಸಿ ಅದನ್ನು ನೈಜ್ಯ ದಾಖಲೆ ಎಂದು ಘೋಷಿಸುವಂತೆ ಕೇಳಬಹುದು. ಈ ಬಗ್ಗೆ ಭಾರತೀಯ ವಾರಸಾ ಕಾಯ್ದೆಯ ಕಲಂ ೨೧೩ ಅನುವು ಮಾಡಿಕೊಡುತ್ತದೆ. ನೆನಪಿಡಿ, ಈ

▶▶ ೪

## ಎಲ್ಲ ನರಹತ್ಯೆ ಕೊಲೆಯಲ್ಲ

ಎರಡು ಗುಂಪಿಗೆ ಮಧ್ಯೆ ಜಗಳ ಆರಂಭ ಆಗಿ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಆ ಕ್ಷಣದ ಸಿಟ್ಟಿನ ಭರದಲ್ಲಿ ಆಪಾದಿತ ಸಂತ್ರಸ್ತನನ್ನು ಹತ್ಯೆ ಮಾಡಿದ ಅಪರಾಧ ಕೊಲೆಯಲ್ಲ ಬದಲಾಗಿ ಕೊಲೆಯಲ್ಲದ ಅಪರಾಧಿಕ ನರಹತ್ಯೆ (culpable homicide not amounting to murder) ಮತ್ತು ಈ ಅಪರಾಧ ಅಪರಾಧ ಪ್ರಕ್ರಿಯಾ ಸಂಹಿತೆಯ ಕಲಂ ೩೦೪ ಭಾಗ II ರಂತೆ ಇರುವ ಅಪರಾಧಿಕ ಕೃತ್ಯ ಎಂದಿದೆ ಸರ್ವೋಚ್ಚ ನ್ಯಾಯಾಲಯ.

ನ್ಯಾಯಾಲಯ ಗಮನಿಸಿದಂತೆ ಈ ಪ್ರಕರಣದಲ್ಲಿ ಜಗಳ ಶುರುವಾದಾಗ ಆಪಾದಿತ ಕೈಗೆ ಸಿಕ್ಕ ಕಟ್ಟಿಗೆಯ ತುಂಡಿನಿಂದ ಸಂತ್ರಸ್ತನಿಗೆ ಹೊಡೆದಿದ್ದರು. ಹೊಡೆತದ ಪರಿಣಾಮವಾಗಿ ಸಂತ್ರಸ್ತ ಸತ್ತಿದ್ದರಿಂದ ವಿಚಾರಣಾ ಸೆಶನ್ಸ್ ನ್ಯಾಯಾಲಯ ಕಲಂ ೩೦೪ ಭಾಗ II ರಂತೆ ಆಪಾದಿತನಿಗೆ ಶಿಕ್ಷೆ ವಿಧಿಸಿ ಹತ್ತು ವರ್ಷದ ಸೆರೆವಾಸದ ಶಿಕ್ಷೆ ವಿಧಿಸಿತ್ತು.

ಆಪಾದಿತರ ಶಿಕ್ಷೆ ಮತ್ತು ಪ್ರಮಾಣ ಅಪೀಲಿನಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯದಲ್ಲಿ ಎತ್ತಿ ಹಿಡಿಯಲಾಗಿದ್ದರಿಂದ ಅವರು ಅಪೀಲಿನಲ್ಲಿ ಸರ್ವೋಚ್ಚ ನ್ಯಾಯಾಲಯಕ್ಕೆ ವಿಶೇಷ ಅನುಮತಿಯಿಂದ ಬಂದಿದ್ದರು.

ಸರ್ವೋಚ್ಚ ನ್ಯಾಯಾಲಯ ಅವರ ಮೇಲಿನ ಆಪಾದನೆ, ಅದಕ್ಕೆ

▶▶ ೪

೧೭ನೇ ವರ್ಷದ ಪ್ರಕಟಣೆ

ಲಹರಿ ಕಮ್ಯುನಿಕ್ ಮತ್ತು ಲಹರಿ ಸಂವಾದದಲ್ಲಿ ಪ್ರಕಟಗೊಳ್ಳುವ ಎಲ್ಲ ಲೇಖನ, ಬರಹಗಳು ಪತ್ರಿಕೆಯ ಬೌದ್ಧಿಕ ಆಸ್ತಿಯಾಗಿರುತ್ತವೆ. ಸಂಪಾದಕರ ಲಿಖಿತ ಅನುಮತಿಯ ವಿನಃ ಲೇಖನ, ಬರಹಗಳ ಪುನರ್‌ಮುದ್ರಣವು ಕೃತಿಸ್ವಾಮ್ಯ ಅಧಿನಿಯಮ, ೧೯೫೭ರ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆ. ದಯವಿಟ್ಟು ಗಮನಿಸಿ.
–ಸಂ.

## ಸಂಪಾದಕೀಯ

# ಇದೇನು ಪ್ರಹಸನ ಈ ಹಿರಿಯರದು?

ಡಿಸೆಂಬರ್ ತಿಂಗಳ ಎರಡನೆ ವಾರದ ಬೆಳವಣಿಗೆಯೊಂದರಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲರ ಪೈಕಿ ಒಬ್ಬರಾದ ರಾಜೀವ್ ಧವನ್ ಭಾರತದ ಮುಖ್ಯ ನ್ಯಾಯಮೂರ್ತಿಗೆ ಪತ್ರ ಬರೆದು 'ತಾವು ಇನ್ನು ಮುಂದಿನಿಂದ ವಕಾಲತ್ತು ವಹಿಸುವುದಿಲ್ಲ ಎಂದರು. ದೆಹಲಿ ಪ್ರಕರಣ (ದೆಹಲಿ ಎನ್‌ಸಿಟಿ ವಿರುದ್ಧ ಭಾರತ ಸರಕಾರ)ಕ್ಕೆ ಅವಮಾನಕರ ಅಂತ್ಯ ಕಂಡ ನಂತರ ನಾನು ನ್ಯಾಯಾಲಯದಲ್ಲಿ ವಕಾಲತ್ತು ವಹಿಸದೆ ಇರಲು ನಿರ್ಧರಿಸಿದ್ದೇನೆ' ಎಂದರು. ಪತ್ರದ ಲೇಖಕ ಮುಂದುವರಿದು ತಮ್ಮ ಹಿರಿಯ ವಕೀಲರ ಗೌನನ್ನು ಹಿಂದಿರುಗಿಸಲು ಸಿದ್ಧರಿರುವುದಾಗಿ, ಆದರೆ ಮುಖ್ಯ ನ್ಯಾಯಮೂರ್ತಿ ಒಪ್ಪಿದರೆ ತಮ್ಮ ನೆನಪು ಮತ್ತು ಸೇವೆಯ ಗುರುತಿಗಾಗಿ ಅದನ್ನು ಉಳಿಸಿಕೊಳ್ಳುವುದಾಗಿ ಹೇಳಿದರು. 'ನ್ಯಾಯಾಲಯ ಮತ್ತು ಅದರ ಕಾರ್ಯವಿಧಾನದಲ್ಲಿ ಏನೋ ಮೂಲಭೂತವಾಗಿ ತಪ್ಪಿದೆ' ಎಂದೂ ಆಪಾದಿಸಿದರು, ಧವನ್ ತಮ್ಮ ಪತ್ರದಲ್ಲಿ. ಅದಾದ ಕೆಲವೆ ಕೆಲವು ದಿನಗಳಲ್ಲಿ ರಾಮ ಜನ್ಮಭೂಮಿ ವಿವಾದಕ್ಕೆ ಸಂಬಂಧಿಸಿದಂತೆ ಬಾಕಿ ಇರುವ ಪ್ರಕರಣ ಒಂದರಲ್ಲಿ ವಕೀಲರಾಗಿ ಹಾಜರಾಗಲು ತಮ್ಮ ಹಿಂದಿನ ನಿರ್ಧಾರ ಕೈ ಬಿಟ್ಟಿರುವುದಾಗಿ ಮೊದಲ ಪತ್ರ ಕಳಿಸಿದ ವಿಳಾಸಕ್ಕೆ ಎರಡನೆ ಪತ್ರ ಕಳಿಸಿದರು. ಈ ಪತ್ರ ಪಡೆದವರು ಅವುಗಳಿಗೆ ಏನಾದರೂ ಜವಾಬು ಕೊಡುವ ಸೌಜನ್ಯ ತೋರಿದರೋ ಇಲ್ಲವೊ ಎಂಬುದು ಸಾರ್ವಜನಿಕ ವಲಯದಲ್ಲಿ ಲಭ್ಯ ಇರುವ ಮಾಹಿತಿಯಿಂದ ಸ್ಪಷ್ಟಪಡುವುದಿಲ್ಲ.

ಇದೇನೂ ಇಂತಹ ಮೊದಲ ಘಟನೆ ಅಲ್ಲ. ಈ ಹಿಂದೆ ಇನ್ನೊಬ್ಬ ಹಿರಿಯ ವಕೀಲ, ಗೋಪಾಲ ಸುಬ್ರಮಣ್ಯಂ ಪ್ರತಿಭಟನೆಯ ರೀತಿಯ ಪತ್ರ ಬರೆದಿದ್ದರು-ಅಂದಿನ ಭಾರತದ ಮುಖ್ಯ ನ್ಯಾಯಮೂರ್ತಿಗೆ. 'ನೀವು ನಿವೃತ್ತಿ ಹೊಂದುವವರೆಗೂ ನಾನು ಈ ನ್ಯಾಯಾಲಯಕ್ಕೆ ಬರುವುದಿಲ್ಲ' ಎಂದಿದ್ದರು. ಕೇಂದ್ರದಲ್ಲಿ ಹಿಂದಿನ ಸರಕಾರ ಇದ್ದಾಗ ನ್ಯಾಯಾಲಯದ ಕೊಲೆಜಿಯಂ ಗೋಪಾಲ ಸುಬ್ರಮಣ್ಯಂರ ಹೆಸರನ್ನು ನ್ಯಾಯಾಧೀಶರ ಸ್ಥಾನಕ್ಕೆ ಶಿಫಾರಸು ಮಾಡಿತ್ತು. ಹಾಲಿ ಸರಕಾರ ಅಧಿಕಾರಕ್ಕೆ ಬಂದ ನಂತರ ಈ ಶಿಫಾರಸನ್ನು ಕಡೆಗಾಣಿಸಲಾಯಿತು. ಆಗ ಮುಖ್ಯ ನ್ಯಾಯಮೂರ್ತಿ ತಮ್ಮ ಅಭ್ಯರ್ಥಿತ್ವಕ್ಕೆ ಸಾಕಷ್ಟು ಬೆಂಬಲ ಸೂಚಿಸಲಿಲ್ಲ ಎಂಬುದು ಈ ಹಿರಿಯ ವಕೀಲರ ದೂರಾಗಿತ್ತು. ಹಾಗಾಗಿ ಅಂದಿನ ಮುಖ್ಯ ನ್ಯಾಯಮೂರ್ತಿ ನಿವೃತ್ತಿ ಆಗುವವರೆಗೆ ನ್ಯಾಯಾಲಯಕ್ಕೆ ಬರದೆ ಇರುವ ನಿರ್ಧಾರ ಪ್ರಕಟಿಸಿದ್ದರು.

ಈ ಎರಡೂ ಘಟನೆಗಳನ್ನು ನೋಡಿದರೆ ಈ ಹಿರಿಯ ವಕೀಲರು ಇಂತಹ ಸಂದರ್ಭದಲ್ಲಿ ಹೀಗೇಕೆ ವರ್ತಿಸಿದರು, ಇಂತಹ ಪ್ರಹಸನ ಏಕೆ ಮಾಡಿದರು ಎಂಬ ಪ್ರಶ್ನೆ ಏಳದೆ?

ತಮ್ಮ ಅಭ್ಯರ್ಥಿತ್ವಕ್ಕೆ ಹೊಸ ಸರಕಾರ ಕಾರದ ತಕರಾರಿದೆ ಎಂದು ಅರಿತ ಗೋಪಾಲ ಸುಬ್ರಮಣ್ಯಂ ಧೀಮಂತವಾಗಿ ಹಿಂದೆ ಸರಿದಿದ್ದರು. ಆದರೆ ಮುಖ್ಯ ನ್ಯಾಯಮೂರ್ತಿಯ ಮೇಲೇಕೆ ಸಿಟ್ಟು? ಸಿಟ್ಟಿದ್ದರೂ ನ್ಯಾಯಾಲಯದಲ್ಲಿ ವಕಾಲತ್ತನ್ನು - ತಾತ್ಕಾಲಿಕವಾದರೂ ಸರಿ - ನಿಲ್ಲಿಸುವ ಬಾಲಿಶ ತೀರ್ಮಾನ ಏಕೆ?

ಮೊದಲನೆ ಸಂದರ್ಭದಲ್ಲಿ ಇನ್ನೂ ಅನೇಕ ಪ್ರಶ್ನೆಗಳು ಉದಿಸುತ್ತದೆ. ಮುಖ್ಯ ನ್ಯಾಯಮೂರ್ತಿಯ ಮೇಲೆ ಸಿಟ್ಟು ಮಾಡಿಕೊಂಡು ವಕಾಲತ್ತು ತ್ಯಜಿಸಲು ಅದೇನು ಮುಖ್ಯ ನ್ಯಾಯಮೂರ್ತಿ ಕೊಟ್ಟ ಉಡುಗೊರೆಯೆ? ಕೆಲ ನೌಕರಿಯ ಅವಧಿ ನೌಕರಿ ಕೊಟ್ಟವರ ಇಷ್ಟ ಪರ್ಯಂತ (... during the pleasure of ...) ಇರುತ್ತದೆ. ವಕೀಲ ವೃತ್ತಿ, ಹಿರಿಯ ವಕೀಲರ ಸ್ಥಾನ ಮುಖ್ಯ ನ್ಯಾಯಮೂರ್ತಿಯ ಇಷ್ಟ ಪರ್ಯಂತದ ವೃತ್ತಿ ಮತ್ತು ಸ್ಥಾನ ಅಲ್ಲ ಎಂಬುದನ್ನು ಮರೆತರು ಧವನ್. ತಮ್ಮ ವೃತ್ತಿ ಮತ್ತು ಸ್ಥಾನದ ಗೌರವವನ್ನು ಇಳಿಸಿ ಅದನ್ನು ಮುಖ್ಯ ನ್ಯಾಯಮೂರ್ತಿಯ ಪಾದದಡಿ ಇಟ್ಟರು.

ಈ ಎರಡೂ ಸಂದರ್ಭಗಳಲ್ಲಿ ಇಬ್ಬರೂ ಹಿರಿಯ ವಕೀಲರಿಗೆ ತಮ್ಮದೊಂದು ಸ್ವತಂತ್ರ ವೃತ್ತಿ, ತಮಗೆ ಹಿರಿಯ ವಕೀಲರ ಸ್ಥಾನ ಬಂದಿದ್ದು ವೃತ್ತಿಯಲ್ಲಿ ತಮ್ಮ ಸಾಧನೆಗಾಗಿ ಎಂಬುದು ಆ ಕ್ಷಣಕ್ಕಾದರೂ ನೆನಪು ಇದ್ದಂತೆ ಕಾಣಲಿಲ್ಲ. ದುರದೃಷ್ಟವಶಾತ್ ಅವರಿಬ್ಬರೂ ತಮ್ಮ ವೃತ್ತಿ ಮತ್ತು ಸ್ಥಾನವನ್ನು ಮುಖ್ಯ ನ್ಯಾಯಮೂರ್ತಿಯ ಕೊಡುಗೆ ಎಂದು ಭಾವಿಸಿದ್ದರು ಎಂಬ ಅಭಿಪ್ರಾಯವನ್ನು ಸಾರ್ವಜನಿಕರ ಮನಸ್ಸಿನಲ್ಲಿ ಮೂಡಿಸಿದರು.

# ಮಧ್ಯಂತರ ಅರ್ಜಿ

ಜನಸಾಮಾನ್ಯರಿಗೆ ಕಾನೂನು

**ತಮಗೆ ಬೇಕಾದ ಪರಿಹಾರ ಕೋರಿ ನ್ಯಾಯಾಲಯಕ್ಕೆ ಬರುವ ಪಕ್ಷಗಾರರಿಗೆ ನ್ಯಾಯಾಲಯದ ಪ್ರಕ್ರಿಯೆಗಳ ಬಗ್ಗೆ ಪ್ರಾಥಮಿಕ ಮಾಹಿತಿ ನೀಡುವ ಲೇಖನ ಮಾಲೆ ಕೆಲ ತಿಂಗಳಿನಿಂದ ಪ್ರಕಟವಾಗುತ್ತಿದೆ. ಈ ಮಾಲೆಯಲ್ಲಿ ಹನ್ನೆರಡನೆ ಕಂತಿದು. ಕಳೆದ ತಿಂಗಳ ಕಂತಿನ ವಿಷಯ 'ಮಧ್ಯಂತರ ಅರ್ಜಿಗಳು'. ಈ ಭಾಗ ಅದರ ಮುಂದುವರಿದ ಕಂತು. -ಸಂ.**

**ಸೆರೆವಾಸದಲ್ಲಿ ಇರುವ ಖೈದಿಯನ್ನು ಸಿವಿಲ್ ಪ್ರಕರಣದಲ್ಲಿ ಸಾಕ್ಷಿ ಆಗಿ ಕರೆಸಲು ಅರ್ಜಿ:** ಕ್ರಿಮಿನಲ್ ಪ್ರಕರಣದಲ್ಲಿ ಬಂಧಿತನಾಗಿ ಜೇಲಿನಲ್ಲಿರುವ ವ್ಯಕ್ತಿ ಸಿವಿಲ್ ಪ್ರಕರಣದಲ್ಲಿ ಸಾಕ್ಷಿ ಆಗಿ ಬರಬಾರದು ಎಂದೇನೂ ಇಲ್ಲವಲ್ಲ? ಹಾಗಾಗಿ ಅಂತಹ ಸಾಕ್ಷಿಯನ್ನು ಸಿವಿಲ್ ಪ್ರಕರಣದ ವಿಚಾರಣೆಯಲ್ಲಿ ವಾದಿಯಾಗಲಿ ಪ್ರತಿವಾದಿ ಆಗಲಿ ಸಾಕ್ಷ್ಯ ನುಡಿಯಲು ಕರೆಸಬಹುದು. ಖೈದಿ ತಾನಾಗಿಯೆ ಬರಲಾರ, ಆದ್ದರಿಂದ ಈ ಬಗ್ಗೆ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ ಜೇಲಧಿಕಾರಿಗೆ ನಿರ್ದೇಶನ ಕೋರಿ ಪ್ರಕರಣದ ವಿಚಾರಣೆಯ ವೇಳೆ ಖೈದಿಯನ್ನು ಸಾಕ್ಷಿ ಆಗಿ ಕರೆಸಬಹುದು.

**ಪ್ರಕರಣದ ವಿಚಾರಣೆ ಮುಂದೂಡಲು ಅರ್ಜಿ:** ಬಹುಶಃ ಮಧ್ಯಂತರ ಅರ್ಜಿಗಳಲ್ಲಿ ಬಹು ಕುಖ್ಯಾತವಾದದ್ದು ಇದೆ ಅರ್ಜಿ. ಈ ಅರ್ಜಿ ಸಲ್ಲಿಸಿ ಮುದ್ದತು ಕೇಳಬಹುದು. ೨೦೦೨ ರಿಂದ ಜಾರಿಗೆ ಬಂದ ಕಾಯ್ದೆಯಂತೆ ಸರಕಾರ ಈ ನಿಯಮಕ್ಕೆ ತಿದುಪಡಿ ತಂದು ಮೂರಕ್ಕಿಂತ ಹೆಚ್ಚು ಮುದ್ದತು ನೀಡದಂತೆ ಕಾನೂನನ್ನು ಬಿಗಿಗೊಳಿಸಿತು. ಹಾಗಿದ್ದೂ ಸರ್ವೋಚ್ಚ ನ್ಯಾಯಾಲಯ ವಿಶೇಷ ಪ್ರಕರಣಗಳಲ್ಲಿ ಮೂರಕ್ಕಿಂತ ಹೆಚ್ಚು ಮುದ್ದತು ಕೊಡಬಹುದು ಎಂದು ಇದನ್ನು ಸಡಿಲಗೊಳಿಸಿತು. ಈಗ 'ವಿಶೇಷ' ಎಂಬುದು ದಿನನಿತ್ಯದ ಹಾಡಾಗಿ ತಿದ್ದುಪಡಿಯ ಯಾವ ಪ್ರಭಾವವೂ ಉಳಿದಿಲ್ಲ. ಪ್ರತಿ ಮುದ್ದತು ಕೊಟ್ಟಾಗಲೂ ಅದಕ್ಕೆ ನ್ಯಾಯಾಲಯ ಕಾರಣ ಕೊಡಬೇಕು ಎನ್ನುತ್ತದೆ ಈ ನಿಯಮ. ನ್ಯಾಯಾಲಯಗಳು ಈ ನಿಯಮವನ್ನು ಗೌರವಿಸಿದ್ದಕ್ಕಿಂತ ಉಲ್ಲಂಘಿಸಿದ್ದೆ ಹೆಚ್ಚು.

**ತೀರಿಕೊಂಡ ಪಕ್ಷಗಾರರ ವಾರಸುದಾರರನ್ನು ದಾಖಲೆಯಲ್ಲಿ ತರಲು ಅರ್ಜಿ:** ದಾವಾ ಹೂಡಿದ ವಾದಿಯೋ ದಾವಾ ಎದುರಿಸಬೇಕಾದ ಪ್ರತಿವಾದಿಯೊ ತೀರಿಕೊಂಡರನ್ನಿ ಆಗೇನು? ತೀರಿಕೊಂಡ ವ್ಯಕ್ತಿಯೊಂದಿಗೆ ಅವನ/ಅವಳ ಹಕ್ಕು ಅಥವಾ ಬಾಧ್ಯಸ್ಥಿಕೆಯು ತೀರಿಕೊಳ್ಳುವುದಾದರೆ ದಾವಾ ಅಲ್ಲಿಗೆ ಮುಗಿಯಿತು. ಈ ಹಕ್ಕು/ಬಾಧ್ಯಸ್ಥಿಕೆ ಉಳಿದು ಅವರ ವಾರಸುದಾರರಿಗೆ ವರ್ಗಾವಣೆ ಆಗುವುದಾದರೆ ಅಂತಹ ವಾರಸುದಾರರನ್ನು ದಾವಾದಲ್ಲಿ ಪಾರ್ಟಿ ಮಾಡಬೇಕು. ಈ ಮಧ್ಯಂತರ ಅರ್ಜಿ ಈ ವಿಷಯಕ್ಕೂ ಮತ್ತು ಸಂಬಂಧಿಸಿದ ವಿಷಯಕ್ಕೂ ಅನುವು ಮಾಡಿಕೊಡುತ್ತದೆ.

**ದಾವಾ ಹಿಂಪಡೆಯುವ ಮತ್ತು ರಾಜಿಗೆ ಅರ್ಜಿ:** ಚಾಲ್ತಿಯಲ್ಲಿರುವ ದಾವಾದಲ್ಲಿ ಕೆಲ ಪ್ರತಿವಾದಿಗಳೊಂದಿಗೆ ಮಾತ್ರ ರಾಜಿ ಆದರೆ, ದಾವಾ ನಡೆದಾಗ ಅದನ್ನು ಹಿಂಪಡೆಯುವುದಾದರೆ, ಹೂಡಿದ ದಾವಾವನ್ನು ಅರ್ಧಕ್ಕೆ ಕೈ ಬಿಟ್ಟರೆ ಪರಿಣಾಮ ಗಂಭೀರ. ಇದಕ್ಕೆ ಸಂಬಂಧಿಸಿರುವುದೆ ದಾವಾ ಹಿಂಪಡೆಯುವ ಮತ್ತು ರಾಜಿ ಮಾಡಿಕೊಳ್ಳುವ ಅರ್ಜಿ. ದಾವಾ ನಡೆದಾಗ ಅದನ್ನು ಹಿಂಪಡೆಯುವುದಾದರೆ, ರಾಜಿ ಮಾಡಿಕೊಳ್ಳುವುದಾದರೆ ಅಥವಾ ಅದನ್ನು ಅರ್ಧಕ್ಕೆ ಕೈಬಿಡುವ ಸಂದರ್ಭ ಬಂದೊದಗಿದರೆ ಈ ಬಗ್ಗೆ ಜನಸಾಮಾನ್ಯರಾದ ನಿಮಗೆ ಗಮನ ಇರಲಿ.

**ಕಮಿಷನ್ ನೇಮಕಕ್ಕೆ ಅರ್ಜಿ:** ನ್ಯಾಯಾಲಯ ತಾನಾಗಿಯೆ ಮಾಡಲಾಗದ ಕೆಲವು ಕೆಲಸ-ಕಾರ್ಯಗಳನ್ನು ನಿರ್ವಹಿಸಲು ಕಮಿಶನ್ ನೇಮಿಸುತ್ತದೆ. ಹೀಗೆ ನೇಮಿಸಲ್ಪಟ್ಟವರು ಕೋರ್ಟ್ ಕಮಿಶ್‌ನರ್. ಇವರು ನ್ಯಾಯಾಲಯ ಮಾಡಲಾಗದ ಸಾಮಾನ್ಯ ಕೆಲಸ ಕಾರ್ಯಗಳನ್ನೂ ಇನ್ನು ಕೆಲವು ಬಾರಿ ತಜ್ಞರು ಮಾತ್ರ ಮಾಡಬಹುದಾದ ತಜ್ಞ ಕೆಲಸಗಳನ್ನೂ ನ್ಯಾಯಾಲಯದ ಪರವಾಗಿ ಮಾಡುತ್ತಾರೆ. ಇವರ ನೇಮಕಕ್ಕಾಗಿ ಈ ಅರ್ಜಿ. ನ್ಯಾಯಾಲಯಕ್ಕೆ ಬರಲಾಗದ ಸಾಕ್ಷಿಗಳ ವಿಚಾರಣೆ, ವಿವಾದಿತ ಸ್ಥಳದ ಪರಿಶೀಲನೆ ವಿವಾದಿತ ಮತ್ತು ಒಪ್ಪಿತ ಸಹಿಯ ಮಾದರಿಗಳ ಹೋಲಿಕೆ ಮತ್ತು ಆ ಬಗ್ಗೆ ತಜ್ಞ ವರದಿ, ಇಬ್ಬರು ವ್ಯಕ್ತಿಗಳ ಡಿಎನ್ಎ ಹೋಲಿಕೆ, ಹೀಗೆ ಕಮಿಶನ್ ನಿರ್ವಹಿಸುವ ಕೆಲಸ-ಕಾರ್ಯಗಳು ಅನೇಕ. ಕಮಿಶನ್ ನೇಮಕಕ್ಕೆ ಅರ್ಜಿ ಸಲ್ಲಿಸಿ, ಕಮಿಶನರ್ ನೇಮಕದ ಅಗತ್ಯವನ್ನು ನ್ಯಾಯಾಲಯಕ್ಕೆ ಮನವರಿಕೆ ಮಾಡಿಕೊಟ್ಟು, ನೇಮಕದ ಆಜ್ಞೆ ಪಡೆದರೆ ಮಾತ್ರ ಈ ಸೌಲಭ್ಯ ಲಭ್ಯ.

**ಮಾನಸಿಕ ಅಸ್ವಸ್ಥರ ಮತ್ತು ಅಪ್ರಾಪ್ತರ ಪೋಷಕರ ನೇಮಕಕ್ಕೆ ಅರ್ಜಿ:** ಮಾನಸಿಕ ಅಸ್ವಸ್ಥರು ಮತ್ತು ಅಪ್ರಾಪ್ತ ವಯಸ್ಕ (ಎಂದರೆ ಹದಿನೆಂಟು ವರ್ಷ ತುಂಬದ ವ್ಯಕ್ತಿಗಳು)ರು ತಾವಾಗಿಯೆ ದಾವಾ ಹೂಡಲಾರರು ಅಥವಾ ದಾವಾ ಎದುರಿಸಲಾರರು. ಅವರ ಪರವಾಗಿ ವಯಸ್ಕ ಪೋಷಕರೊಬ್ಬರು ಈ ಕಾರ್ಯ ನಿರ್ವಹಿಸಬೇಕು. ಇಂತಹ ಪೋಷಕರ ನೇಮಕಕ್ಕೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕು. ಈ ಪೋಷಕರು ಹೊಣೆಯಿಂದ ನಿವೃತ್ತಿ ಬಯಸಿದರೆ, ಹೊಣೆಗಾರಿಕೆ ಜಾರಿಯಲ್ಲಿದ್ದಾಗಲೆ ತೀರಿಕೊಂಡರೆ ಆಗೇನು ಎಂಬುದಕ್ಕೂ ಈ ನಿಯಮ ಅನುವು ಮಾಡಿಕೊಡುತ್ತದೆ.

**ಲುಕ್ಸಾನುದಾರ ದಾವಾ ಹೂಡಲು ಅರ್ಜಿ:** ಆರ್ಥಿಕವಾಗಿ ನಷ್ಟ (ಲುಕ್ಸಾನು) ಹೊಂದಿದವರು ದಾವಾ ಹೂಡುವಾಗ ನ್ಯಾಯಾಲಯದ ಶುಲ್ಕ ಭರಿಸಲು ಸಾಧ್ಯ ಇಲ್ಲ. ಹಾಗಾಗಿ ಲುಕ್ಸಾನುದಾರನಾಗಿ ದಾವಾ ಹೂಡುವಾಗ ಎಂದರೆ ದಾವಾ ಹೂಡುವ ಮೊದಲು ವಾದಿ ತಾನು ಲುಕ್ಸಾನುದಾರ ಎಂದು ಘೋಷಿಸುವಂತೆ ನ್ಯಾಯಾಲಯವನ್ನು ಕೋರಬೇಕು. ಈ ಉದ್ದೇಶಕ್ಕೆ ಒದಗುವುದೆ ಈ ಅರ್ಜಿ.

[ಇನ್ನೂ ಹಲವಾರು ರೀತಿಯ ಅರ್ಜಿಗಳ ಬಗ್ಗೆ ಈ ಮಾಲೆಯಲ್ಲಿ ಲೇಖನ ಮುಂದಿನ ತಿಂಗಳು. -ಸಂ.]

LAHARI COMMUNIQUE
Its Unique

Volume : 29
Issue : 10
January 2018

# 'Process of land acquisition had proved to be unpopular': J | V Gopal Gowda

"Property of subject is under the eminent domain of the state…the state may use and even alienate and destroy such property … for the ends of public utility", said Justice V. Gopal Gowda (Retd), quoting 17th century Dutch Philosopher, Hugo Grotius. J| Gowda, retired judge of the Supreme Court of India, was addressing the 11th P.G.C.Chengappa Memorial Lecture. The retired judge was examining the doctrine of eminent domain underlying the law relating to land acquisition of the year 1894 and 2013.

Bengaluru based Lahari Advocates' Forum (R) which is celebrating tri decennial year of its existence has been organising memorial lecture in honour of its Founder President P.G.C.Chengappa. The current one was the 11th in the series.

The lecture titled, "Eminent Domain-Analysis of Land Acquisition Law" was held in the Patron-in-Chief Hall of the High Court of Karnataka, Bengaluru on 24th Nov. 2017.

Tracing the history of application of the doctrine in India, J| Gopal Gowda said "Eminent Domain has been applied in India since the era of Independence.....". Examining the impact of displacement caused by land acquisition law of the year 1894 for the period from 1951 to 90, he said that it affected over 21.6 million people. "They have been displaced for the purpose of large scale projects like dams, canals, thermal plants, sanctuaries, industrial facilities and mining", said the speaker examining the nature of projects for which human displacement of this magnitude has been caused. These displacements are generally categorized as

▶▶4

## 29th year of publication

# New law likely for adoption

The union ministry of Women and Child Development has prepared a draft Cabinet Note proposing an amendment to Hindu Adoption and Maintenance Act (HAMA) in order to make it compulsory for parents to register with the apex adoption body, Child Adoption Resource Authority (CARA). This was disclosed by a spokesperson of the ministry recently. Thus, if the Note becomes law by way of amendment to HAMA, parents adopting child will be required mandatorily to register adoption with the Authority.

It is reported that the proposed amendment to HAMA is part of efforts to check child trafficking which is rampant now in the name of adoption.

▶▶4

# No PIL which potentially blocks investment: SC

"Investors come to build infrastructure with an assured return on their investment. If we interfere in the project after its completion, tell us how will a state attract investment?" The apex Court made these observations while dismissing a belated Public Interest Litigation that questioned allotment of land to a multinational company in Gujarat.

Gujarat Govt attracted certain foreign investment to build a state of the art sports complex in the state. The related Memorandum of Understanding (MoU) was signed in 2009 at the Vibrant Gujarat Summit. Much after the completion of the project, Babubhai Meghaji Shah, a Gujarat Congress MLA filed a PIL in the High Court challenging the terms and conditions of land allotment to an MNC for constructing sports complexes. After its dismissal by the Court, the petitioner approached the apex Court with the same plea of quashing the MoU.

By the time the petition was filed, the MNC, SE TransStadia had built a sports complex in Ahmadabad that could be converted from an outdoor stadium to an indoor one in six minutes and many tournaments were also held.

Not agreeing to entertain PIL, the bench said, "How far can Courts go? PILs were devised as a mode to address the grievances of the poor and underprivileged who had no access to justice. But now it has gone on to investigate scams and many other fields. Now, it is used to question whether there should be a sports facility or not"

# Minor rape victims need not depose

Sealing one of the escape routes for accused in all types of sexual assault cases, the Supreme Court recently said that if the victim is minor or woman of unsound mind, she need not be compelled to depose before Court to corroborate the charges. It further said that to bring home the guilt of accused, other evidence if sufficient is enough.

The Court was dealing with an appeal by the State of Maharashtra after an order of conviction in a rape case was set aside by the Bombay High Court saying, "since the victim herself was not examined, the factum of rape and involvement of the accused could not be held to have been proved".

A Sessions Judge in Nagpur had sentenced a man to seven year's imprisonment for raping a mentally challenged deaf and dumb minor girl. He had relied upon other corroborative evidence as the rape victim was incapable of facing cross-examination because of her mental and physical deficiencies.

▶▶4

*News, articles and other writes up published in this News Magazine are the intellectual property of the News Magazine. Any form of reproduction thereof by any one without the written consent of the Editor would amount to violation of the provisions of the Copy Right Act, 1957. -Ed.*

# Lalji Singh, 'father of DNA fingerprinting in India,' no more

Eminent scientist and 'father of DNA fingerprinting in India' Lalji Singh (70) died following heart attack recently. He was 70.

Dr. Singh was one of the pioneers in making DNA fingerprinting a widely practiced science in India. Thanks to his efforts along with that of many others, DNA finger printing in India both at the level of research as well as for forensic applications has gained wide acceptance.

Lalji advanced certain techniques which led to DNA profiling being used to establish parentage as well as crack many high profile crime cases in India.

Considering his meritorious work, Singh was commissioned by the Government to establish the Centre for DNA Fingerprinting and Diagnostics (CDFD) with a mandate of making it a nodal centre for DNA fingerprinting and diagnostics for all species and several diseases. This was during late 1990s. Lalji Singh was also the Director of Centre for Cellular and Molecular Biology (CCMB) in Hyderabad for about a decade. He was the Vice Chancellor of the Banaras Hindu University his alma mater from 2001 to 2014.

Dr.Singh hailed from Uttar Pradesh. He was the recipient of Padma Shri award.

# Assam AG puts in paper, says 'not allowed to work with dignity'

Chinmoy Choudhury resigned as Advocate General of Assam during middle of November, saying there was 'outside interference in his functioning, he was not allowed to work with full dignity and that there was no congenial atmosphere for him to work'.

"I have put in my papers to the government on three grounds. While there was outside interference on my work, I was not allowed to work with full dignity as the AG's office required. Moreover, the atmosphere in which I was made to work was not congenial," Choudhury told media.

Choudhury was appointed as AG on June 28 last year after the new Government took over.

Choudhury said there was no point clinging to an office where there was no dignity. "I found that there was no point clinging to a post where there is no dignity. Moreover, many a times I was not aware of various decisions of the government which are supposed to be taken in consultation with the advocate general," he said. "It is quite natural to feel offended", said Choudhury.

The Assam Government immediately accepted the resignation and appointed Ramesh Chandra Borpatra-Gohain, currently Dean, Faculty of Law in Gauhati University, as the new Advocate General of the state.

*For Lahari Legal Service & subscription contact:*
K. Suryanarayan Rao - 9845529448
Anu Chengappa - 9980047780
C.M Kemepegowda - 9844180988

*Well wisher of the month R.Rajagopalan, Advocate, Bengaluru*

## Quotes

*"Are prisoners persons? Yes, of cour: answer in the negative is to convict the natic the Constitution of dehumanization ar repudiate the world legal order, which now recognizes rights of prisoners in the International Covenant of Prisoners Right to which our Country has signed assent..... Pri: are peculiarly and doubly handicapped. For one thing, most prisoners belong to the weaker segment, in poverty, literacy, social station and the like. Secondly, the prison house is a walled-off world which is incommunicado for the human world, with the result that the bonded inmates are invisible, their voices inaudible, their injustice unheeded. So it is imperative, as implicit in Article 21, that life or liberty, shall not be kept in suspended animation or congealed into animal existence without the freshening flow of fair procedure."*

***SC in a recent judgment quoting from Sunil Batra.***

*"The English language is not an instrument of mathematical precision. Our literature would be much the poorer if it were. He (the Judge) must set to work in the constructive task of finding the intention of Parliament, and he must do this not only from the language of the statute, but also from a consideration of the social conditions which have rise to it, and of the mischief which it was passed to remedy, and then he must supplement the written word so as to give "force and life" to the intention of the legislature....... A judge should ask himself the question, how, if the makers of the Act had themselves come across this ruck in the texture of it, they would have straightened it out? He must then do as they would have done. A judge must not alter the material of which the Act is woven, but he can and should iron out the creases."*

***SC in a recent judgment quoting Lord Denning from Seaford Court Estates Ltd.,***

*"The courts should be extremely slow in passing any kind of restraint or order stopping a creative man from writing drama, a book, philosophy or projecting his thoughts in a film or theatre art.....It is worthy to mention that right to freedom of speech and expression is sacrosanct and should not be ordinarily interfered with. When the CBFC has granted permission for the release of the film after scrutiny, this court should exercise utmost restraint in not granting any injunction....... Be it noted that any film, drama, theatre or novel is a creation of artistic expression. An artist has freedom to express himself/herself in a manner which is not prohibited in law......History of the world records there are authors who expressed thoughts by choosing words, phrases and expressions to create characters who may look very different than what an ordinary man can conceive.."*

***SC refusing to restrain exhibition of film An Insignificant Man based on the life of Arvind Kejriwal.***

# New law likely for adoption

While Hindus, Buddhists, Jains and Sikhs have the option of adopting child under HAMA, provisions under the stringent Juvenile Justice (JJ) Act, 2015 are secular provisions for adoption whereunder even Muslims, Parsis, Christians and Jews can adopt. For Muslims, Parsis, Christians and Jews their personal laws do not permit adoption. Childless couple of these religions can only be guardians of child under the Guardians and Wards Act till the child turns 18 years. Under the HAMA any one complying with legal standards can adopt. But the JJ Act provides for verification of source of child and for thorough background check of prospective parents. Such mandatory provisions are not part of the HAMA. Therefore, the proposed amendment aims to establish an apex adoption body, Child Adoption Resource Authority to act as the registry for all adoptions under the HAMA.

"Adoption under HAMA is very simple and two Hindus can exchange a child after filing a deed. We did a sample check and discovered that the number of adoptions under HAMA is too high and we suspect that a lot of these involved trafficked children," the spokesperson disclosed.

# Individual - as the Focus of the Constitution

## Part I

## Perspective

V. Sudhish Pai
vsudhishpai@gmail.com



The recent Privacy judgment- K.S.Puttaswamy v. Union of India (2017) 10 SCC 1 has highlighted the pivotal position of the individual as the focal point of the Constitution. The thrust of the judgment is, as the Indian Constitutional scheme has always understood, that the individual is not a cog in the wheel. He has his inalienable rights and primordial place in society.

Fundamental rights have been characterised as the protective wall against State power. They act as a fetter or limitation on plenary legislative power and also provide conditions for fuller development of the people including their individual dignity. A fundamental right cannot be denied even if a miniscule fraction of the populace is affected by violation of such right. The invasion of a fundamental right is not rendered tolerable when a few are subjected to hostile discrimination. What distinguishes India is the adoption of a democratic way of life founded on the Rule of Law. Democracy accepts differences of perception, acknowledges divergences in ways of life and respects dissent.

The Constitution is also a political and social testament created to secure the goals set out in the Preamble. The Constitution seeks to secure to all citizens, justice, liberty, equality and fraternity. The individual lies at the core of the constitutional focus and the ideals of justice, liberty, equality and fraternity animate the vision of securing a dignified existence to the individual. The Constitution is founded on the bedrock of the balance between the Part III and Part IV and places the individual at the forefront of its focus, guaranteeing civil and political rights in Part III & embodying an aspiration for achieving social and economic rights in Part IV. In a constitutional democracy it is the right to question, to scrutinise and to dissent that enables an informed citizenry- the governed to scrutinise and rein in the government. The full growth and flowering of the human personality and the development of the community can take place far better in conditions of freedom. Development is not "merely the process of increasing inanimate objects of convenience". The value of accomplishing such conveniences must depend on how it impacts on the life and freedom of the people- whether people have the 'freedom to do what they have reason to value.' Development is really expansion of people's freedom. That is the blending of the guarantees in Part III and the objectives in Part IV. The overall societal good and welfare is to be achieved by the advancement and welfare of the individual. It is this which the Constitution seeks to achieve- stability without stagnation and growth without destruction of values. The golden triangle of Arts 14, 19 and 21 is to be supported by the Directives to make life, which is more than mere animal existence, meaningful both in the material and spiritual sense. That is the constitutional vision and goal.

With the individual as the focus of the Constitution, the Court delineated the content and the contours of the right to privacy and how it is conceptually and functionally extremely vital in securing the individual's liberty and ensuring his dignity both of which alone make life and the right to life worthwhile and meaningful. Part III of the Constitution weaves a pattern of guarantees on the texture of basic human rights. The guarantees delimit the protection of rights in their allotted field: they do not attempt to enunciate distinct rights. The idea of liberty is quite complex and comprehensive. The scheme underlining the fundamental rights is to look at each of the fundamental rights not as a series of isolated points but as a rational continuum of the legal concept of liberty. Privacy is a concomitant of the right of the individual to exercise control over his personality. Its origin is in natural rights which are inherent and inalienable because they are inseparable from the human personality. It was underscored that 'life' in Article 21 comprehends one's being in its fullest sense; to live is to live with dignity; dignity is the core which unites the fundamental rights, and privacy with its attendant values assures dignity; and liberty can be true only when life can be enjoyed with dignity. The cardinal value of liberty pervades the entire Fundamental Rights chapter. Even more significant is the preeminent value of fraternity which assures individual dignity. Article 21, more than any other provision, reflects these constitutional values in their full plenitude. In the constitutional entrenched rights dignity of the individual is on a high pedestal. Privacy is thus a core value which the protection of life and liberty is intended to achieve. The right to privacy has drawn support from the significance and sanctity attached to individual liberty. This is a universal and enduring value.

*(To be concluded. Ed)*

## Around the Courts

### *Sec. 34 & 43, Karnataka Stamp Act – who is liable to pay stamp duty & penalty when the document impounded?*

An interesting question arose before the Karnataka High Court as to who is liable to pay deficit stamp duty and penalty. The question arose because plaintiff in a case tendered a document in evidence executed by defendant. The document was insufficiently stamped. The trial Court impounded the document and directed the defendant to pay deficit stamp duty and penalty thereon. In the writ petition filed by the defendant the High Court held:

a) Under Sec. 34 of the Act it is he who tenders such document is required to pay stamp duty and penalty though it may be executed by the other party

b) Having paid duty and penalty, the party may recover the amount from the other party under Sec. 43 of the Act if the other party is primarily liable to pay duty.

### *Sec. 125, Code the Criminal Procedure – maintenance – is illegitimate child also entitled?*

The question `whether an illegitimate child is entitled to maintenance under Sec. 125, Code the Criminal Procedure' arose before Karnataka High Court. The Court ruled:

a) Aim of Sec. 125 is to prevent vagrancy and destitution of weaker section like women, children and aged parents

b) Court under Sec. 125 proceedings has to follow summary procedure.

c) In summary procedure rights of parties cannot be decided.

d) Considering this there is no discrimination between an illegitimate child and a legitimate one to award maintenance under the law.

### *Appointment of Arbitrator by CJ or designated judge– Sec. 11 (6&8), Arbitration and Conciliation Act, 1996 – person specified in agreement – no other choice?*

Whether the Chief Justice or designated judge of the High Court has to appoint the person specified in the agreement as the arbitrator or he can make a choice? Faced with this question, the apex Court held that though an arbitrator is specified in agreement for arbitration, if circumstances so warrant, Chief Justice or designated Judge is free to appoint an independent arbitrator, having due regard to qualification, if any and other aspects as required under Sec. 11(8) of the Act.

# Process of land acquisition...

1 ▶▶

"development related displacement", noted the speaker.

The speaker then went on to examine such displacements under the old Act from the perspective of common men. "...process of land acquisition by State Governments in India proved to be unpopular", noted the speaker. Examining the cause of unpopularity, he said that the amount reimbursed to the land losers was fairly low with regard to the current index of prices prevailing in the economy. He also noted that due to the low level of human capital of the displaced people, they often failed to find adequate employment. Referring to the draft Government's Policy for Rehabilitation, J| V.G.Gowda said about three quarter of people displaced since 1951 are still awaiting rehabilitation. Even this figure relates to what is known as `direct displacement'. The policy does not cover fishermen, landless labourers and artisans who get displaced indirectly. He hinted that Dalits and Adivasis are severely hit by Dam projects.

Turning his attention to the short comings in the Land Acquisition Act, 1894, J| Gopal Gowda said that the legislation did not bother about the displaced people. "The Act did not address the issues of rehabilitation and resettlement of the affected persons and their families", noted the speaker. In spite of many amendments by States and the Union Government these issues were never adequately addressed which lead to growing public concern, according to the speaker. He further noted that since rehabilitation and resettlement of displaced persons is another facet of the coin land acquisition, a single integrated law dealing with both the aspects of the matter was necessary.

The speaker then went on to examine the new law namely, The Right to Fair Compensation and Transparency in Land Acquisition, Rehabilitation and Resettlement Act, 2013, that replaced the old one of the year 1894. Quoting from the Statement of Objects and Reasons the speaker recognized that the Act, 2013 redefined, 'Public Purpose' so that Government's intervention in acquisition is limited and not as wide as in the repealed enactment. He also noted that the Act, 2013 provided for comprehensive package for rehabilitation and resettlement of land losers.

The speaker then turned his attention to the procedure to be followed under the Act, 2013 for acquisition of land. In order to examine the procedure in detail, the speaker thought it "... appropriate to sketch the theme of the Act". He then examined the procedure in detail starting from proposal to acquire land, appointment of committee headed by District Collector, examination of the report of the DC by High Level Committee headed by Secretary, appointment of expert committee to evaluate social impact of land acquisition, report by the special committee listing measures to secure livelihood and welfare of the land losers, etc.,

Justice Gowda noted that before the Government issues notification to acquire land it has to take two steps; one is to appoint a Committee to prepare a report on social impact and second is to appoint an Authority for rehabilitation and resettlement.

The speaker also noticed the difference between the Act, 1894 and the Act, 2013 so far as they relate to initiation of process of acquisition of land. While under the Act, 1894 it was publication of notification under Sec. 4 of the Act, under the new Act it is preparation of Social Impact Assessment Report which sets in motion the process of acquisition.

The Author then dealt extensively with preparation and publication of Social Impact Assessment Report. The report would contain facilities provided to the displaced persons.

Under Sec. 10 of the Act, 2013 food safety is an important consideration to deny acquisition of land. Multi cropped land with irrigation facility can be acquired only under exceptional circumstance. Further, waste land equivalent to the size of irrigated land acquired shall be developed for agricultural purpose.

Under Sec. 16 of the Act, 2013 after the preliminary notification proposing to acquire the land is issued, two steps must follow, noted the speaker. Firstly, the authorized officer should survey the land and record the assets available therein and the payment to be made for damages during survey shall be paid immediately. Secondly, the Administrator shall publish the rehabilitation and resettlement provisions. This is followed by declaration of 'Re-Settlement Area' for resettlement of displaced persons.

The speaker considered Sec. 21 as substantial section for the reason, "The Collector after publishing the consequential Final Declaration of the Government to acquire the land shall issue a Public Notice calling upon every body to file his/her objections and representations before him so that he may make the final Award...". The Award concerns "...firstly... the compensation and secondly... the benefits under the scheme of rehabilitation and resettlement", noted the speaker.

The speaker also dealt with determination of land value by the Collector, payment of compensation, solatium, etc.,

J| B..S.Patil, Judge of Karnataka High Court was the Guest of Honour. In his short speech, J| Patil dealt with finer aspects of the law relating to land acquisition.

Anu Chengappa, President of Lahari Advocates' Forum presided over the function and welcomed the gathering. Shankar Sharma Vice President of the Forum proposed the vote of thanks.

# Minor rape victims...

1 ▶▶

In the appeal to the High Court, the convict was freed on the ground of non examination of the very victim of the rape.

Supreme Court not agreeing with the judgment of the High Court said there was sufficient evidence against the accused to convict him and he could not be acquitted just because the rape survivor was not examined. "The evidence of the mother of the victim clearly shows that it was the respondent-accused who took away the victim. The victim and the accused were seen together on the date of commission of offence. The victim immediately after the occurrence narrated the same to her mother as to what happened as reflected in the FIR and the version of the mother. Rape has been confirmed by medical evidence. Identity of accused is not in dispute. In these circumstances, the trial Court having convicted the respondent, the High Court was not justified in setting aside the conviction," the judgment read.

The SC laid down a set of guidelines to be followed by trial Courts while handling criminal cases where the victim is unable to depose and corroborate before the Court. These guidelines are in addition to a set of guidelines issued by the apex Court in 2004 on the manner of holding trial in child sex abuse and rape cases. The Court had then directed that arrangements be made in trial Courts to ensure that victims or vulnerable witnesses need not see the body or face of the accused and the question to be put in cross-examination to the victim should be given in writing.

## Obituary

***We regret to inform the sad demise of the following***

- On 23-12-2017 N Raghupathi (82), Advocate, passed away at Bengaluru.
- On 23-12-2017 V.Appi Reddy (60), Advocate, passed away at Bengaluru.


**Printed & Published by :** Lahari Advocates Forum, Bangalore
**Printed at :** Vee Kay Printers & Publishers, # 396, Ooliga Complex, Sampige Road, Malleshwaram, Bangalore-560 003.
Published at : # 8/340, Prabhat Complex, K.G. Road, Bangalore-560 009
**Editor : Aravind. M. Neglur.** aravindneglur@gmail.com
**RNI No. KARBIL 2010/64911**

# ಕಾಣದ ದುಡ್ಡಿನ ಬೆನ್ನತ್ತಿ...

**ಪ್ರಚಲಿತ**

ಬಿಟ್ ಕಾಯ್ನ್, ಕ್ರಿಪ್ಟೊ ಕರೆನ್ಸಿ ಎಂದೆಲ್ಲ ಕರೆಸಿಕೊಳ್ಳುವ ಕಾಣದ ದುಡ್ಡಿನ ಹಿಂದೆ ದೇಶದ ದೊಡ್ಡ ಸಂಖ್ಯೆಯ ಜನರು ಬೆನ್ನತ್ತಿ ಹೊರಟಿದ್ದಾರೆ. ಇವರಲ್ಲಿ ದುಡ್ಡಿನ ದುರಾಸೆಯ ಹುಂಬರಷ್ಟೆ ಅಲ್ಲ ಜವಾಬ್ದಾರಿಯುತ ಹೂಡಿಕೆದಾರರೂ ಇದ್ದಾರೆ. ಇತ್ತೀಚಿನ ವರ್ಷಗಳಲ್ಲಿ ಜನಪ್ರಿಯ ಆಗುತ್ತಿರುವ ಈ ದುಡ್ಡು, ಕುಳಿತಲ್ಲೆ ದುಡ್ಡು ಮಾಡಬೇಕೆನ್ನುವವರಿಗೆ ಒಂದು ವರದಾನವಾಗಿ ಬಂದಿದೆ. Virtual Currency ಎಂದು ಕರೆಸಿಕೊಳ್ಳುವ ಈ ದುಡ್ಡನ್ನು ಕಂಡವರು ಯಾರೂ ಇಲ್ಲ. ಹಾಗೆಂದು ಈ ಕಾರಣದಿಂದ ಇದನ್ನೊಂದು ವಂಚಕರ ಸಂಚು ಎನ್ನುವಂತಿಲ್ಲ. ಕಾಣದಿರುವುದೆ, ಕೈಯಲ್ಲಿ ಹಿಡಿದು ಕಿಸೆಗೆ ಹಾಕಿಕೊಳ್ಳಲು ಬಾರದಿರುವುದೆ ಇದರ ಮೂಲಭೂತ ಲಕ್ಷಣ, ಅದೆ ಇದರ ಶಕ್ತಿ. ಈ ದುಡ್ಡಿಗೆ ರಾಷ್ಟ್ರಗಳ ಗಡಿಯ ಹಂಗಿಲ್ಲ. ಎಲ್ಲಿ ಬೇಕಾದರೂ ಇದನ್ನು ಚಲಾಯಿಸಬಹುದು-ಕೊಡುವವರು, ತೆಗೆದುಕೊಳ್ಳುವವರು ಒಪ್ಪಿದರೆ.

ಈ ಬಿಟ್ ಕಾಯ್ನ್ ಹೊಂದುವುದು ಹೇಗೆ? ಈಗಂತೂ ಎರಡು ದಾರಿಗಳಿವೆ. ಒಂದೊ, ನೀವು ಸಂಪಾದಿಸಬೇಕು. ಎಂದರೆ ನಿಮ್ಮ ಶುಲ್ಕವಾಗಿ ಅಥವಾ ನಿಮ್ಮ ಸಂಬಳವಾಗಿ ನಿಮಗೆ ಯಾರಾದರೂ ಬಿಟ್ ಕಾಯ್ನ್ ಪಾವತಿ ಮಾಡಿದರೆ ನೀವು ಇದರ ಮಾಲೀಕರಾದಿರಿ. ಅಥವಾ ನೀವಿದನ್ನು ಕೊಂಡುಕೊಳ್ಳಬೇಕು-ಜಗತ್ತಿನ ಕೆಲವೆ ಕೆಲವು ರೀತಿಯ ಸ್ಟಾಕ್ ಎಕ್ಸ್‌ಚೇಂಜ್ ರೀತಿಯ ವಿನಿಮಯ ಕೇಂದ್ರಗಳಲ್ಲಿ. ಇವು ಖಾಸಗಿ ಕೇಂದ್ರಗಳು. ಈ ವಿನಿಮಯ ಕೇಂದ್ರಗಳಿರುವುದು ಭಾರತದಲ್ಲಿ ಅಲ್ಲ. ಈ ಬಿಟ್ ಕಾಯ್ನ್‌ಗಳ ಬೆಲೆ ನಿರ್ಧರಿಸುವವರು ಭಾರತ ಸರಕಾರದವರಲ್ಲ, ಇದರ ದರ ಏರಿಕೆ ಇಳಿಕೆಯಲ್ಲಿ ಯಾರದೊ ಕೈವಾಡ ಇರಬಹುದು, ಇಲ್ಲದೆಯೂ ಇರಬಹುದು. ಅಕಸ್ಮಾತ್ ಇದರ ಬೆಲೆ ಮಾರುಕಟ್ಟೆಯ ಏರಿಳಿತವನ್ನು ಅವಲಂಬಿಸದೆ ಯಾರದೊ-ಅಂತರರಾಷ್ಟ್ರೀಯ ವಂಚಕ ಜಾಲದವರೊ, ಉಗ್ರಗಾಮಿಗಳೊ-ಕೈವಾಡವನ್ನು ಅವಲಂಬಿಸಿದ್ದರೆ ಲಕ್ಷಾಂತರ ಹೂಡಿಕೆದಾರರ ಕೋಟ್ಯಾಂತರ ರೂಪಾಯಿಗಳ ಹಣ ಕ್ಷಣಾರ್ಧದಲ್ಲಿ ಮಂಗಮಾಯ ಆಗಬಹುದು. ಹೀಗೆ ದುಡ್ಡು ಕಳೆದುಕೊಂಡವರಿಗೆ ಯಾವ ಪರಿಹಾರವೂ ಇಲ್ಲ. ಈ ವಿನಿಮಯ ಕೇಂದ್ರಗಳು ನಡೆಯುವುದು ಅಂತರ್ಜಾಲ ತಾಣಗಳ ಮೇಲೆ. ನೀವು ಸಂಪಾದಿಸಿದರೂ ಕೊಂಡರೂ ಈ ಹಣವೇನು ನಿಮ್ಮ ಕೈಗೆ ಸಿಗದು, ನಿಮ್ಮ ಕಾಣದ ಖಾತೆಗೆ ಜಮೆಯಾಗುತ್ತದೆ ಅಷ್ಟೆ. ನೀವಿದನ್ನು online ವ್ಯವಹಾರಗಳಲ್ಲಿ ಖರ್ಚು ಮಾಡಬಹುದು ಅದಕ್ಕೇನೂ ತೊಂದರೆ ಇಲ್ಲ.


ಕಾಲ್ಪನಿಕ ದುಡ್ಡಿನ ಕಾಲ್ಪನಿಕ ಚಿತ್ರ

ಭಾರತದಲ್ಲಿ ಶೇರು ವಿನಿಮಯ ಕೇಂದ್ರಗಳಲ್ಲದೆ ಸರಕು ವ್ಯಾಪಾರ ವಿನಿಮಯ ಕೇಂದ್ರಗಳಿವೆ. ಅಲ್ಲಿ ನೀವು ಹಂದಿ ಮಾಂಸ, ಹುಣಸೆ ಬೀಜ, ಕಚ್ಚಾ ತೈಲ ಹೀಗೆ ಅಲ್ಲಿ ಪಟ್ಟಿಯಾಗಿರುವ ಹಲವು ಸರಕುಗಳನ್ನು ಕಡಿಮೆ ಬೆಲೆಗೆ ಕೊಂಡು ಬೆಲೆ ಹೆಚ್ಚಾದಾಗ ಮಾರಿ ಲಾಭ ಗಳಿಸಬಹುದು. ನಿಮಗೆ ಈ ಕೇಂದ್ರಗಳೊಂದಿಗೊ ಅವರ ಬ್ರೋಕರ್‌ಗಳೊಂದಿಗೊ ವಿವಾದ ಆದರೆ ಕಾನೂನಿನಂತೆ ರಚಿತವಾದ ಸೆಬಿಯನ್ನು ಸಂಪರ್ಕಿಸಿ ಸೂಕ್ತ ಪರಿಹಾರ ಪಡೆಯಬಹುದು. ಬಿಟ್ ಕಾಯ್ನ್ ವಿಷಯದಲ್ಲಿ ಹೀಗಾದರೆ? ಭಾರತ ಸರಕಾರದ ಯಾವ ಸಂಸ್ಥೆಗೂ ಈ ಬಗ್ಗೆ ಅಧಿಕಾರವೆ ಇಲ್ಲ. ಈ ಬಿಟ್ ಕಾಯ್ನ್ ವಿಷಯದಲ್ಲಿ ಇದುವೆ ಭಾರತದಲ್ಲಿ ತಲೆದೋರಿರುವ ಸಮಸ್ಯೆ. ಇದರ ವ್ಯವಹಾರವನ್ನು ನಿಯಂತ್ರಿಸಲು (ನೆನಪಿಡಿ, ನಿಯಂತ್ರಿಸಲು-ನಿಷೇಧಿಸಲು ಅಲ್ಲ) ಕಾನೂನೆ ಇಲ್ಲ. ಈ ವ್ಯವಹಾರವನ್ನು ನಿಷೇಧಿಸಲೂ ಕಾನೂನು ಇಲ್ಲ. ಎಂದರೆ ಇಂತಹ ವ್ಯವಹಾರ ಕಾನೂನು ಬಾಹಿರವೂ ಅಲ್ಲ ಕಾನೂನು ಬದ್ಧವೂ ಅಲ್ಲ. ಕ್ರಿಪ್ಟೊ ಕರೆನ್ಸಿಯ ಕೊಂಡುಕೊಳ್ಳುವಿಕೆ ಮತ್ತು ಕೊಡು ತೆಗೆದುಕೊಳ್ಳುವಿಕೆ ಸಂಪೂರ್ಣವಾಗಿ ಆಯಾ ಪಕ್ಷದವರಿಗೆ ಬಿಟ್ಟ ವಿಷಯವಾಗಿದ್ದು ಈ ಬಗ್ಗೆ ವಿವಾದ ಎದ್ದರೆ ಯಾರೂ ಏನೂ ಮಾಡಲಾಗದ ಸ್ಥಿತಿ ಇದೆ. ಹಾಗೆಂದೆ ೨೦೧೩ರಿಂದ ರಿಸರ್ವ್ ಬ್ಯಾಂಕ್ ಕಾಲಕಾಲಕ್ಕೆ ಕ್ರಿಪ್ಟೊ ಕರೆನ್ಸಿಯ ಹೂಡಿಕೆದಾರರಿಗೆ 'ಜಾಗೃತರಾಗಿರಿ' ಎಂದಷ್ಟೆ ಎಚ್ಚರಿಕೆ ಕೊಡುತ್ತ ಬಂದಿದೆ, ಈ ವ್ಯವಹಾರ ಮಾಡಬೇಡಿ ಎಂದಿಲ್ಲ.

ಇದೆಲ್ಲ ಹೂಡಿಕೆದಾರರ ಬವಣೆ ಆಯಿತು. ಭಾರತದ ಆರ್ಥಿಕ ರಂಗದ ಮೇಲೆ ಆಗುವ ಪ್ರಭಾವ ಏನು ಅಥವಾ ಏನಿರಬಹುದು? ಇದನ್ನು ಗಮನಿಸಿ: ಬಹುರಾಷ್ಟ್ರೀಯ ಕಂಪನಿ ಐಬಿಎಂ ಈಗಾಗಲೆ ತನ್ನದೆ ಆದ ಕ್ರಿಪ್ಟೊ ಕರೆನ್ಸಿ ಬಳಸಿ ವ್ಯವಹಾರ ನಡೆಸುವ ಅಂತರ್ಜಾಲ ತಾಣವನ್ನು ಸಿದ್ಧಪಡಿಸುತ್ತಿದೆ. ಇದನ್ನೆ ಎಲ್ಲರೂ ಅನುಸರಿಸಿದರೆ? ಆ ಕಂಪನಿಗಳ ಭಾರತೀಯ ಗ್ರಾಹಕರೂ ನೌಕರರೂ ಅವರದೆ ಕ್ರಿಪ್ಟೊ ಕರೆನ್ಸಿಯಲ್ಲಿ ವ್ಯವಹರಿಸಬೇಕು. ಅವರು ನಮ್ಮ ರಿಸರ್ವ್ ಬ್ಯಾಂಕ್ ಮುದ್ರಿಸುವ ನೋಟುಗಳ ಹಂಗಿಲ್ಲದೆ ತಮ್ಮದೆ ಸಮಾನಾಂತರ ಆರ್ಥಿಕ ವ್ಯವಸ್ಥೆಯನ್ನು ನಡೆಸಿದಂತೆ ಆಗದೆ? ನಾಣ್ಯ ನೋಟುಗಳ ಮುದ್ರಣ, ಚಲಾವಣೆ ಸರಕಾರದ ಸಾರ್ವಭೌಮ (sovereign) ಅಧಿಕಾರಗಳಲ್ಲಿ ಒಂದು. ಈ ಕೆಲಸವನ್ನು ಬೇರೆ ಯಾರೊ-ವಿದೇಶಿ ಕಂಪನಿ-ಮಾಡಲು ಬಿಡಲು ಸಾಧ್ಯವೆ?

ಇನ್ನೂ ಒಂದು ಸಂಗತಿಯನ್ನೂ ನೀವು ಗಮನಿಸಬೇಕು. ದೇಶದಲ್ಲಿ ಪ್ರತಿ ಹೂಡಿಕೆಗೂ ಆಧಾರ್ ಕಡ್ಡಾಯ ಮಾಡಿರುವುದರಿಂದ ಗುರುತು ಸಿಗದಿರಲು ಹಲವು ಹೂಡಿಕೆದಾರರು ಬಿಟ್ ಕಾಯ್ನ್‌ಗಳಲ್ಲಿ ಹೂಡಿಕೆ ಮಾಡಿದ್ದಾರೆಂದು ವರದಿಯಾಗಿದೆ. ೨೦೧೭ರ ಒಂದೆ ವರ್ಷದಲ್ಲಿ ಬಿಟ್ ಕಾಯ್ನ್‌ಗಳ ಬೆಲೆ ಶೇಕಡಾ ನೂರರಷ್ಟು ಏರಿಕೆ ಆಗಿರುವುದು ಈ ವರದಿಗೆ ಪುಷ್ಟಿ ನೀಡುತ್ತದೆ. ಕಪ್ಪು ಹಣದ ವಿರುದ್ಧ ಹೋರಾಡುತ್ತಿರುವ ಭಾರತಕ್ಕೆ ಬಿಟ್ ಕಾಯ್ನ್ ವಿರುದ್ಧ ಹೋರಾಡಲು ಅಸ್ತ್ರವೆ ಇಲ್ಲ!

ಭಾರತ ಸರಕಾರ ಈ ಬಗ್ಗೆ ಕಾಯಿದೆ ರೂಪಿಸದೆ ಸುಮ್ಮನೆ ಇರಲು ಕಾರಣವೊಂದನ್ನು ನಾವು ಊಹಿಸಬಹುದು. ಬಿಟ್ ಕಾಯ್ನ್ ಬಳಕೆ, ಹೂಡಿಕೆ ಇನ್ನೂ ಪ್ರಬಲವಾಗಿ ಬೆಳೆದಿಲ್ಲ. ಅದಿನ್ನೂ ಬಾಲ್ಯಾವಸ್ಥೆಯಲ್ಲಿ ಇದೆ. ನಂತರ ನೋಡಿದರಾಯಿತು ಎಂದು ಭಾರತ ಸರಕಾರ ಸದ್ಯಕ್ಕೆ ಸುಮ್ಮನಿರುವ ಸಾಧ್ಯತೆ ಇದೆ. ಇದು ಸುಮ್ಮನಿರಲು ಸಕಾರಣ ಅಲ್ಲ. ಅನಾಹುತ ಆದ ಮೇಲೆಯೆ ಎಚ್ಚೆತ್ತುಕೊಳ್ಳಬೇಕು ಎಂದೇನೂ ಇಲ್ಲ. ●

# ಸುಳ್ಳು ಜಾತಿ ಪ್ರಮಾಣ ಪತ್ರ...


ಈ ತೀರ್ಪಿನ ಪ್ರಕರಣಗಳು ಉದಿಸಿದ್ದು ಹೀಗೆ : ಮಹಾರಾಷ್ಟ್ರದಲ್ಲಿ ಹಲವಾರು ಸುಳ್ಳು ಜಾತಿ ಪ್ರಮಾಣ ಪತ್ರಗಳನ್ನು ಪತ್ತೆ ಹಚ್ಚಿ ರದ್ದು ಪಡಿಸಲಾಯಿತು. ಆ ವೇಳೆಗಾಗಲೆ ಸಂಬಂಧಿಸಿದವರು ಪ್ರಮಾಣ ಪತ್ರದಂತೆ ನೌಕರಿ ಪಡೆದೊ, ಶೈಕ್ಷಣಿಕ ಸಂಸ್ಥೆಗೆ ಪ್ರವೇಶ ಪಡೆದೊ ಹಲವು ವರ್ಷಗಳು ಉರುಳಿದ್ದವು. ಅವರೆಲ್ಲ ನ್ಯಾಯಾಲಯದ ಬಾಗಿಲು ತಟ್ಟಿ ತಾವು ಇಂತಹ ಸೌಲಭ್ಯ ಪಡೆದು ಹಲವು ವರ್ಷಗಳು ಕಳೆದಿರುವುದರಿಂದ ನ್ಯಾಯ ಸಮ್ಮತತೆ (equity) ಯ ಸಿದ್ಧಾಂತದಂತೆ ತಮ್ಮ ಸೌಲಭ್ಯಗಳನ್ನಾದರೂ ರಕ್ಷಿಸಬೇಕು ಎಂದು ನ್ಯಾಯಾಲಯದ ಮೊರೆ ಹೋಗಿದ್ದರು. ಹಾಗಾಗಿ ನ್ಯಾಯಾಲಯ ಈ ಅರ್ಜಿದಾರರಿಗೆ ನ್ಯಾಯ ಸಮ್ಮತತೆಯಂತೆ ಏನಾದರೂ ಅನುಕೂಲ ಮಾಡಿಕೊಡಬಹುದೊ ಎಂದು ಪರಿಶೀಲಿಸಿತು.

ಹೀಗೆ ಸುಳ್ಳು ಪ್ರಮಾಣ ಪತ್ರದಂತೆ ಸೌಲಭ್ಯ ಪಡೆದವರಿಗೆ ಯಾವ ಅನುಕೂಲವನ್ನೂ ನ್ಯಾಯಾಲಯ ಮಾಡಿಕೊಡಲಾಗದು ಎನ್ನಲು ಪೀಠ ಅರ್ಜಿದಾರರ ಕ್ರಮದ ಪರಿಣಾಮ ಗಮನಿಸಿತು. ವ್ಯಕ್ತಿಯೊರ್ವ ತಾನು ಇಂತಹ ಜಾತಿಯವನು ಎಂಬ ಹೇಳಿಕೆಯಿಂದ ಪಡೆದ ಸೌಲಭ್ಯ ಹೇಳಿಕೆ ಸುಳ್ಳಾದ ಪ್ರಾರಂಭದ ಕ್ಷಣದಿಂದ ರದ್ದಾಗುತ್ತದೆ. (void ab initio), ಎಂದಿತು ನ್ಯಾಯಾಲಯ. ಇಂತಹ ನಿರ್ಣಯದ ಹಿಂದಿನ ತರ್ಕ ಗುರುತಿಸಿದ ನ್ಯಾಯಪೀಠ ಸಾಮಾನ್ಯ ಪಂಗಡದಲ್ಲಿ ತೀವ್ರ ಸ್ಪರ್ಧೆ ಎದುರಿಸಿ ಸೌಲಭ್ಯ ಪಡೆಯಬೇಕಿದ್ದ ವ್ಯಕ್ತಿಯೊಬ್ಬ ಕಡಿಮೆ ಸ್ಪರ್ಧೆಯ ಕ್ಷೇತ್ರಕ್ಕೆ ಅನರ್ಹನಿದ್ದೂ ಪ್ರವೇಶಿಸಿ, ಸ್ಪರ್ಧಿಸಿ ಸೌಲಭ್ಯ ಪಡೆದಾಗ ಆ ಕ್ಷೇತ್ರದ ಅರ್ಹ ಅಭ್ಯರ್ಥಿಗಳ ಅವಕಾಶ ಕಸಿಯುತ್ತಾನೆ. ಹಾಗಾಗಿ ಇಂತಹ ಪರಿಣಾಮ ಎದುರಿಸಬೇಕಾಗುವುದು ಅನಿವಾರ್ಯ ಎಂದಿದೆ. ಹೀಗೆ ಪಡೆದ ಸೌಲಭ್ಯ ಮೋಸ ಮತ್ತು ವಂಚನೆಯ ಪರಿಣಾಮದಿಂದ ಪಡೆದದ್ದಾಗಿರುವುದರಿಂದ ಅದು ರದ್ದಾಗಬೇಕಾಗಿರುವುದು ಅನಿವಾರ್ಯ ಎಂದಿದೆ ಈ ತೀರ್ಪು. ಮೋಸದಿಂದ ಪಡೆದ ಯಾವ ಸೌಲಭ್ಯವನ್ನು ಉಳಿಸಲು ಸಾಧ್ಯ ಇಲ್ಲ ಎಂದಿರುವ ಈ ತೀರ್ಪು ಸೌಲಭ್ಯಗಳು ಕೆಲವೆ ಕೆಲವಿರುವಾಗ ವಂಚಿಸುವ ವ್ಯಕ್ತಿ ಅದನ್ನು ಉಳಿಸಿಕೊಳ್ಳಲು ಸಾಧ್ಯ ಇಲ್ಲ ಎಂದಿದೆ.

ಪ್ರಮಾಣ ಪತ್ರ ರದ್ದಾದ ನಂತರದ ಪರಿಣಾಮಗಳನ್ನು ಈಗಾಗಲೆ ಹೇಳಿದಂತೆ - ಸಿವಿಲ್ ಮತ್ತು ಕ್ರಿಮಿನಲ್ ಸ್ವರೂಪದ್ದು ಎಂದು ವಿಂಗಡಿಸಿರುವ ನ್ಯಾಯಾಲಯ ವಂಚನೆ ಎಸಗಿದ ವ್ಯಕ್ತಿ ಸೌಲಭ್ಯ ಕಳೆದುಕೊಳ್ಳುವುದು ತಾರ್ಕಿಕ ಪರಿಣಾಮ ಎಂದಿದೆ. ವಂಚನೆಯಿಂದ ಪಡೆದ ಸೌಲಭ್ಯ ವಂಚನೆ ಬಯಲಾದ ನಂತರವೂ ಮುಂದುವರಿಯಲು ಬಿಡದೆ ಇರುವುದು ತಾರ್ಕಿಕವಾಗಿ ಸರಿಯಾದ ಕ್ರಮ, ಇದರಲ್ಲೇನೂ ತಪ್ಪಿಲ್ಲ ಎಂದೂ ಹೇಳಿದೆ.

ಈ ಪಕ್ಷಗಾರರ ಪರ ವಕೀಲರು ವಾದ ಮಂಡಿಸಿ ತಮ್ಮ ತಮ್ಮ ಪಕ್ಷಗಾರರಿಗೆ ಇಂತಹ ಪ್ರಮಾಣ ಪತ್ರ ನೀಡುವಾಗ ಅಪರಾಧಿಕ ಉದ್ದೇಶ ಇತ್ತೆಂದು ಸಾಬೀತಾಗಿಲ್ಲ ಹಾಗಾಗಿ ಇವರ ಸೌಲಭ್ಯ ಹಿಂಪಡೆದಿರುವುದು ಸರಿಯಾದ ಕ್ರಮ ಅಲ್ಲ ಎಂದಿರುವುದನ್ನು ನ್ಯಾಯಾಲಯ ಒಪ್ಪಿಲ್ಲ. ಈ ಕ್ರಮ ಸಿವಿಲ್ ಕ್ರಮವಾಗಿರುವುದರಿಂದ ಅಪರಾಧಿಕ ಉದ್ದೇಶದ ಪ್ರಶ್ನೆಯೆ ಉದ್ಭವಿಸುವುದಿಲ್ಲ ಎಂದಿದೆ.

**ನಿರ್ದಿಷ್ಟ ಪರಿಹಾರ ಅಧಿನಿಯಮ-ಕಲಂ-೧೬- ಅಧಿನಿಯಮದಂತೆ ದಾವಾ-ಒಪ್ಪಂದದ ಸಾಚಾತನ ಒಂದೆ ಅಂಶದ ಪರಿಗಣನತ ಸರಿಯೆ?**




ನಿರ್ದಿಷ್ಟ ಪರಿಹಾರ ಅಧಿನಿಯಮದಂತೆ ಸ್ಥಿರಾಸ್ತಿಯ ಖರೀದಿ ಮಾರಾಟಕ್ಕಾಗಿನ ಕರಾರೊಂದರಂತೆ ದಾವಾ ಹೂಡಲಾಯಿತು. ವಿಚಾರಣಾ ನ್ಯಾಯಾಲಯ ಒಟ್ಟು ವಿವಾದಾಂಶಗಳನ್ನು ರೂಪಿಸಿ ಎಲ್ಲವನ್ನೂ ವಾದಿಯ ವಿರುದ್ಧ ತೀರ್ಮಾನಿಸಿ ದಾವಾ ವಜಾ ಮಾಡಿತು.

ಅಪೀಲಿನಲ್ಲಿ ಉಚ್ಚ ನ್ಯಾಯಾಲಯ ಕೆಳ ನ್ಯಾಯಾಲಯದ ಆಜ್ಞೆಯನ್ನು ರದ್ದುಪಡಿಸಿ ದಾವಾ ಡಿಕ್ರಿ ಮಾಡಿತು. ಹೀಗೆ ಮಾಡುವಾಗ ಉಚ್ಚ ನ್ಯಾಯಾಲಯ ಕೇವಲ ಕರಾರು ಸಾಚಾ (genuineness of contract) ಆಗಿದೆಯೆ ಎಂಬುದನ್ನು ಮಾತ್ರ ಪರಿಗಣಿಸಿ ದಾವಾ ಪುರಸ್ಕರಿಸಿತ್ತು. ಪ್ರತಿವಾದಿಯ ಅಪೀಲಿನಲ್ಲಿ ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯದ ಈ ಕ್ರಮ ಸರಿ ಅಲ್ಲ ಎಂದಿತು. ನಿರ್ದಿಷ್ಟ ಪರಿಹಾರದ ಅಧಿನಿಯಮದ ದಾವಾದಲ್ಲಿ ಕರಾರಿನ ಸಾಚಾತನ ಒಂದೆ ಅಲ್ಲದೆ ಇನ್ನೂ ಹಲವು ವಿಷಯಗಳನ್ನು ಪರಿಗಣಿಸಬೇಕಿರುತ್ತದೆ. ಹಾಗಾಗಿ ಒಂದೆ ಅಂಶವನ್ನು ಆಧರಿಸಿದ ತೀರ್ಪು ಸರಿಯಿಲ್ಲ ಎಂದಿತು ಸರ್ವೋಚ್ಚ ನ್ಯಾಯಾಲಯ.

## ಕ್ರಿಮಿನಲ್ ಪ್ರಕರಣದ ರದ್ಧತಿ...

ನ್ಯಾಯಾಲಯ ಮಹಿಳೆಯ ಹೇಳಿಕೆಯನ್ನು ಗಮನಿಸಿದಾಗ ಕಂಡುಬಂದಿದ್ದು ಇಷ್ಟು: ಮಹಿಳೆ ಕೇವಲ ೨೦ ದಿನಗಳ ಸಾಂಸಾರಿಕ ಜೀವನ ನಡೆಸಿದ್ದರು. ಈ ಅವಧಿಯಲ್ಲಿ ಗಂಡ ಅವರೊಂದಿಗೆ ಸರಿಯಾಗಿ ಮಾತಾಡುತ್ತಿರಲಿಲ್ಲ. ಗಂಡ ಹೆಂಡತಿಯಿಂದ ಅಂತರ ಕಾಯ್ದುಕೊಳ್ಳುತ್ತಿದ್ದರು, ರಾತ್ರಿಯೂ ಅಂತರ ಕಾಯ್ದುಕೊಳ್ಳುತ್ತಿದ್ದರು, ಗಂಡ ಎಂದೂ ತಮ್ಮ ಕರ್ತವ್ಯ ನಿರ್ವಹಿಸಲಿಲ್ಲ. ಗಂಡನಿಗೆ ಸಹ ಜೀವನದಲ್ಲಿ ಆಸಕ್ತಿಯೆ ಇರಲಿಲ್ಲ. ಗಂಡ ಆಸ್ಟ್ರೇಲಿಯಾಕ್ಕೆ ಹೋದ ನಂತರ ಗಂಡನ ಮನೆಯವರೂ ತನ್ನೊಂದಿಗೆ ಮಾತಾಡುತ್ತಿರಲಿಲ್ಲ. ತನ್ನ ತಂದೆ-ತಾಯಿ ಸುಮಾರು ಹದಿನೈದು ಲಕ್ಷ ರೂಪಾಯಿ ಖರ್ಚು ಮಾಡಿ ಮದುವೆ ಮಾಡಿದ್ದಾರೆ, ಇತ್ಯಾದಿ, ಇಷ್ಟೆ ಅವರ ಹೇಳಿಕೆಯ ಸಾರಾಂಶ. ಈ ಹೇಳಿಕೆಯನ್ನು ಆಧರಿಸಿ ಪೋಲೀಸರು ವರದಕ್ಷಿಣೆ ಕಿರುಕುಳ ಮತ್ತು ನಂಬಿಕೆ ದ್ರೋಹದ ಪ್ರಕರಣ ದಾಖಲಿಸಿದ್ದರು, ಗಂಡ ಮತ್ತು ಗಂಡನ ಮನೆಯವರ ವಿರುದ್ಧ! ಸರ್ವೋಚ್ಚ ನ್ಯಾಯಾಲಯ ಇಡಿ ಪ್ರಕರಣವನ್ನು ರದ್ದುಪಡಿಸಿತು.

## ಎಲ್ಲ ನರಹತ್ಯೆ ಕೊಲೆಯಲ್ಲ

ಪೂರಕವಾಗಿ ಇದ್ದ ಸಾಕ್ಷ್ಯಾಧಾರ ಮತ್ತು ಈ ಬಗೆಗೆ ಎರಡೂ ನ್ಯಾಯಾಲಯಗಳ ಕಾರಣ ಸಹಿತ ನಿರ್ಣಯಗಳನ್ನು ಗಮನಿಸಿತು.

ವಿಚಾರಣಾ ನ್ಯಾಯಾಲಯದ ತೀರ್ಪಿನಂತೆ ಪೋಲೀಸರು ಕೊಲೆ ಪ್ರಕರಣ ದಾಖಲಿಸಿದ್ದರೂ ಸಾಕ್ಷ್ಯಾಧಾರ ದೊರೆತಿದ್ದು ಬೇರೆ ರೀತಿಯದು. ತಕ್ಷಣ ಪ್ರಾರಂಭವಾದ ಜಗಳದಲ್ಲಿ ಹತ್ಯೆಯ ಅಪರಾಧ ನಡೆದಿತ್ತು. ಈ ಜಗಳ ನಡೆದಿದೆ ಎಂದು ತೋರಿಸಲು ಆಪಾದಿತನ ಮೈಮೇಲೆ ಗಾಯವಾಗಿದ್ದನ್ನು ಸಾಕ್ಷಿ ವಿಚಾರಣೆಯಲ್ಲಿ ಎತ್ತಿ ತೋರಿಸಲಾಗಿತ್ತು. ಈ ಕಾರಣದಿಂದ ಇದು ಒಂದು ಪಕ್ಷದವರು ಏಕಪಕ್ಷೀಯವಾಗಿ ಇನ್ನೊಂದು ಪಕ್ಷದವರ ಮೇಲೆ ನಡೆಸಿದ ಹಲ್ಲೆ ಅಲ್ಲ, ಬದಲಾಗಿ ಎರಡು ಗುಂಪಿನ ಮಧ್ಯೆ ನಡೆದ ಜಗಳ ಒಬ್ಬನ ಹತ್ಯೆಯಲ್ಲಿ ಪರ್ಯವಸನಗೊಂಡ ಘಟನೆ ಎಂದು ಸ್ಪಷ್ಟಪಟ್ಟಿತ್ತು. ಈ ಎಲ್ಲ ಕಾರಣಗಳಿಂದ ಸತತವಾಗಿ ಮೂರು ನ್ಯಾಯಾಲಯಗಳಲ್ಲಿ ಇದು ಕೊಲೆ ಅಲ್ಲ ಬದಲಾಗಿ ಅಪರಾಧಿಕ ನರಹತ್ಯೆ ಎಂದಾಗಿ ಆ ಪ್ರಕಾರ ಶಿಕ್ಷೆ ವಿಧಿಸಲ್ಪಟ್ಟಿತು.

ವಿಚಾರಣಾ ನ್ಯಾಯಾಲಯ ವಿಧಿಸಿದ್ದ ಹತ್ತು ವರ್ಷದ ಸೆರೆವಾಸವನ್ನು ಐದು ವರ್ಷಕ್ಕೆ ಇಳಿಸಿತು ಸರ್ವೋಚ್ಚ ನ್ಯಾಯಾಲಯ.

## ಹಿಂದೂ ಮರಣ ಶಾಸನ...

ಕಾಯಿದೆ ಜಾರಿಗೆ ಬಂದಿದ್ದು ೧೯೨೫ರಲ್ಲಿ. ಸಣ್ಣ ಪುಟ್ಟ ಬದಲಾವಣೆಗಳನ್ನು ಹೊರತುಪಡಿಸಿ ಈ ಕಾಯ್ದೆ ಇಂದಿಗೂ ಹಾಗೆ ಉಳಿದು ಬಂದಿದೆ.

ಈಗಾಗಲೆ ಹೇಳಿದಂತೆ ಈ ಕಾಯಿದೆಯ ಕಲಂ ೨೧೩ ಪ್ರೊಬೆಟ್ ಪಡೆಯಲು ಅವಕಾಶ ಮಾಡಿಕೊಡುತ್ತದೆ. ಕಲಂ ೫೭ ಪ್ರೊಬೆಟ್ ಪಡೆಯಲು ಕೆಲ ಮಿತಿಗಳನ್ನು ಹೇರುತ್ತದೆ. ಕಲಂ ೫೭(a) ಮತ್ತು (b) ಪ್ರಕಾರ ಮೊದಲನೆಯದಾಗಿ ಉಯಿಲು ಬರೆದ ಸ್ಥಳ ಕಲ್ಕತ್ತಾ, ಮದ್ರಾಸ್ ಮತ್ತು ಬಾಂಬೆ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಊರು ಆಗಿದ್ದರೆ ಆಗ ಪ್ರೊಬೆಟ್ ಬೇಕಿಲ್ಲ. ಎರಡನೆಯದಾಗಿ, ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಯ ಊರಲ್ಲೆ ವಿಲ್ಲು ಬರೆದೂ ವಿಲ್ಲಿಗೆ ಸಂಬಂಧಿಸಿದ ಆಸ್ತಿ-ಪಾಸ್ತಿ ಈ ಅಧಿಕಾರ ವ್ಯಾಪ್ತಿಯಿಂದ ಹೊರಗಿರುವ ಸ್ಥಳದಲ್ಲಿದ್ದರೆ ಆಗಲೂ ಪ್ರೊಬೆಟ್ ಬೇಕಿಲ್ಲ.

ಈ ಮೇಲಿನ ಸಂದರ್ಭದಲ್ಲಿ 'ಬೇಕಿಲ್ಲ' ಎಂಬ ಪದದ ಅರ್ಥ ನ್ಯಾಯಾಲಯದ ಮಿಮಾಂಸೆಗೆ ಒಳಪಟ್ಟಿತು. 'ಬೇಕಿಲ್ಲ' ಎಂದರೆ ನ್ಯಾಯಾಲಯಕ್ಕೆ ಪ್ರೊಬೆಟ್ ಹೊರಡಿಸಲು ಅಧಿಕಾರ ಇಲ್ಲ ಎಂದೆ? ಅಥವಾ ಇಂತಹ ಸಂದರ್ಭಗಳಲ್ಲಿ ಪಕ್ಷಗಾರ ಪ್ರೊಬೆಟ್ ಕೇಳಲು ಹಕ್ಕು ಹೊಂದಿಲ್ಲವೆ? 'ಊಹೂಂ ಈ ಎರಡೂ ಅಲ್ಲ' ಎಂದಿದೆ ಈ ತೀರ್ಪು.

ಈ ಪ್ರಕರಣ ಉಚ್ಚ ನ್ಯಾಯಾಲಯದ ಮುಂದೆ ಬಂದಿದ್ದು ಹೀಗೆ: ಬೆಂಗಳೂರಿನ ನಿವಾಸಿ ಒಬ್ಬರು ಬೆಂಗಳೂರಿನಲ್ಲಿಯೆ ಇರುವ ಆಸ್ತಿ-ಪಾಸ್ತಿಗಳ ಬಗ್ಗೆ ಉಯಿಲೊಂದನ್ನು ಬರೆದಿಟ್ಟು ತೀರಿಕೊಂಡರು. ಈ ಉಯಿಲನ್ನು ಜಾರಿಗೊಳಿಸ ಬೇಕಾಗಿದ್ದವರೂ ಅಥವಾ ಅದರಂತೆ ಆಸ್ತಿ ಪಡೆದವರೂ ಈ ಉಯಿಲಿನಂತೆ ಪ್ರೊಬೆಟ್ ಹೊರಡಿಸುವಂತೆ ಸಿಟಿ ಸಿವಿಲ್ ನ್ಯಾಯಾಲಯವನ್ನು ಕೇಳಿಕೊಂಡರು. ವಿಚಾರಣೆಯ ನಂತರ ನ್ಯಾಯಾಲಯ ಕಾಯ್ದೆಯ ಕಲಂ ೫೭ (a) ಮತ್ತು (b) ಪ್ರಕಾರ ಪ್ರೊಬೆಟ್ ಬೇಕಿಲ್ಲದಿರುವುದರಿಂದ ಪಿಟಿಶನ್ ವಜಾ ಮಾಡಲಾಗಿದೆ ಎಂದು ಆಜ್ಞಾಪಿಸಿತು. ಈ ಆಜ್ಞೆಯನ್ನು ಪ್ರಶ್ನಿಸಿ ಪಿಟಿಶನ್‌ದಾರರು ಉಚ್ಚ ನ್ಯಾಯಾಲಯಕ್ಕೆ ಅಪೀಲು ಬಂದರು.

ಇವರಿಗೆ, ತೆರೆದ ಅಂಚೆ

..............................................................................

..............................................................................

..............................................................................

## ನಿರ್ದಿಷ್ಟ ಪರಿಹಾರ ಅಧಿನಿಯಮದ ಡಿಕ್ರಿ...

ಮಾರಾಟಗಾರು ಆಸ್ತಿ ಮಾರಾಟ ಮಾಡಲು ನಿರಾಕರಿಸಿದರು ಎಂದು ಆಪಾದಿಸಿ ಅಭಯ ಕುಮಾರ ದಾವಾ ಹೂಡಿದರು. ಈ ದಾವಾದಲ್ಲಿ ದಿನಾಂಕ ೧೯.೧೧.೯೫ರ ಕರಾರನ್ನು ನಿರ್ದಿಷ್ಟವಾಗಿ ಜಾರಿಗೊಳಿಸಲು ಡಿಕ್ರಿ ಕೇಳಲಾಗಿತ್ತು. ಕಾಲಾಂತರದಲ್ಲಿ ಈ ದಾವಾ ಡಿಕ್ರಿಯೂ ಆಯಿತು. ಈ ತೀರ್ಪಿನಲ್ಲಿ ವಿಚಾರಣಾ ನ್ಯಾಯಾಲಯ ದಿನಾಂಕ ೧೯.೧೧.೯೫ ರ ಕರಾರಿಗೂ ವಾದಿ ಸ್ಟ್ಯಾಂಪ್ ಶುಲ್ಕ ಕೊಡಬೇಕು ಎಂದು ನಿರ್ದೇಶಿಸಿತ್ತು. ಶುಲ್ಕ ೧೯.೧೧.೯೫ ರಂದು ಕೊಡಬೇಕಾಗಿದ್ದರಿಂದ ಮತ್ತು ೨೦೦೪ ರಲ್ಲಿ ದಾವಾ ಡಿಕ್ರಿಯಾದ ನಂತರ ಶುಲ್ಕ ವಸೂಲಾತಿಗೆ ಆದೇಶಿಸಿದ್ದರಿಂದ-ಎಂದರೆ ವಿಳಂಬ ಆಗಿದ್ದರಿಂದ-ನ್ಯಾಯಾಲಯವು ವಾದಿ ಶುಲ್ಕದೊಂದಿಗೆ ದಂಡ (penalty) ವನ್ನೂ ತುಂಬಬೇಕು ಎಂದೂ ಆದೇಶಿಸಿತ್ತು. ಈ ನಿರ್ದೇಶನ ಅಲ್ಲದೆ ಇನ್ನೆರಡು ನಿರ್ದೇಶನಗಳನ್ನು ನೀಡಿದ ನ್ಯಾಯಾಲಯ ಡಿಕ್ರಿ ದಿನಾಂಕದಿಂದ ಎರಡು ತಿಂಗಳ ಒಳಗಾಗಿ ಪ್ರತಿಪಾದಿಗೆ ವಾದಿಯು ಮಾರಾಟದ ಉಳಿಕೆ ಹಣವನ್ನು ಕೊಡಬೇಕು ಎಂದೂ ಮತ್ತು ಈ ಎಲ್ಲ ಷರತ್ತುಗಳನ್ನು ವಾದಿ ಎರಡು ತಿಂಗಳಲ್ಲಿ ಪೂರೈಸದೆ ಇದ್ದರೆ ಅವರಿಗೆ ಕ್ರಯಪತ್ರ ಬರೆಸಿಕೊಳ್ಳಲು ಹಕ್ಕಿರುವುದಿಲ್ಲ ಎಂದೂ ಹೇಳಿತ್ತು.

ವಾದಿ ಎರಡು ತಿಂಗಳಲ್ಲಿ ಮಾರಾಟಗಾರನಿಗೆ ಉಳಿದ ಹಣವನ್ನು ಸಂದಾಯ ಮಾಡಿದರು. ಆದರೆ ಸ್ಟ್ಯಾಂಪ್ ಶುಲ್ಕ ಮತ್ತು ದಂಡದ ಪಾವತಿ ಮಾಡಲಿಲ್ಲ. ವಾದಿ ಜಾರಿ ಪಿಟಶನ್ ಸಲ್ಲಿಸಿ ತಮ್ಮ ಹೆಸರಿನಲ್ಲಿ ಪ್ರತಿವಾದಿಯಾಗಲಿ ಅಥವಾ ನ್ಯಾಯಾಲಯವಾಗಲಿ ಖರೀದಿ ಪತ್ರ ಬರೆದು ಕೊಟ್ಟು ನೊಂದಣಿ ಮಾಡಿಸಬೇಕು ಎಂದು ಕೋರಿದರು.

ಡಿಕ್ರಿದಾರ ಸ್ಟ್ಯಾಂಪ್ ಶುಲ್ಕ ಮತ್ತು ದಂಡ ಕೊಟ್ಟಿಲ್ಲ ಎಂಬ ಕಾರಣಕ್ಕೆ ನ್ಯಾಯಾಲಯ ಪಿಟಿಶನ್ನನ್ನು ವಜಾ ಮಾಡಿತು ಎಂದು ಕಾಣುತ್ತದೆ. ಡಿಕ್ರಿದಾರ ಮಧ್ಯ ಪ್ರದೇಶದ ಉಚ್ಚ ನ್ಯಾಯಾಲಯಕ್ಕೆ ಸಿವಿಲ್ ಪುನರೀಕ್ಷಣಾ ಅರ್ಜಿ ಸಲ್ಲಿಸಿದರು. ಉಚ್ಚ ನ್ಯಾಯಾಲಯವು ಅವರ ಜಾರಿ ಪಿಟಿಶನ್ ವಜಾ ಆಗಿದ್ದನ್ನು ಎತ್ತಿಹಿಡಿಯಿತು. ಈ ಆಜ್ಞೆಯನ್ನು ಡಿಕ್ರಿದಾರ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದರು.

ಅಪೀಲಿನಲ್ಲಿ ನ್ಯಾಯಾಲಯ ಗಮನಿಸಿದಂತೆ ಮೂರು ಷರತ್ತುಗಳನ್ನು ಕೆಳ ನ್ಯಾಯಾಲಯದ ಡಿಕ್ರಿ ವಿಧಿಸಿತ್ತು. ಆ ಪೈಕಿ ಒಂದನ್ನು ಡಿಕ್ರಿದಾರರು ಪಾಲಿಸಿದ್ದರು. ಸ್ಟ್ಯಾಂಪ್ ಶುಲ್ಕಕ್ಕೆ ಸಂಬಂಧಿಸಿದಂತೆ ಇನ್ನೆರಡನ್ನು ಅವರು ಪಾಲಿಸಿರಲಿಲ್ಲ. ಸ್ಟ್ಯಾಂಪ್ ಶುಲ್ಕ ಕೊಡಬೇಕು ಎಂದು ಆದೇಶಿಸುವಾಗ ಅದನ್ನು ನಿಷ್ಕರ್ಷೆ (adjudication) ಮಾಡಬೇಕು. ಅಂತೆಯೆ ದಂಡ ಕೊಡಬೇಕು ಎಂದು ಆದೇಶಿಸಿದಾಗ ದಂಡದ ಪ್ರಮಾಣ ನಿರ್ಧಾರ (determination) ಆಗಬೇಕು. ಹೀಗೆ ನಿಷ್ಕರ್ಷೆ ಮತ್ತು ನಿರ್ಧಾರ ಇಲ್ಲದೆ ವಾದಿ-ಡಿಕ್ರಿದಾರ ಈ ಸಂಬಂಧಿತ ಷರತ್ತನ್ನು ಪೂರೈಸಬೇಕು ಎಂದು ಕೆಳ ನ್ಯಾಯಾಲಯ ಅಪೇಕ್ಷಿಸಿತ್ತು ಎಂಬುದನ್ನು ನ್ಯಾಯಾಲಯ ಗಮನಿಸಿತು.

ಈ ಹಂತದಲ್ಲಿ ೧೮೯೯ರ ಭಾರತೀಯ ಸ್ಟ್ಯಾಂಪ್ ಕಾಯ್ದೆಯಂತೆ ನ್ಯಾಯಾಲಯ ನಿಷ್ಕರ್ಷೆ ಮಾಡದೆಯೂ ವಾದಿ-ಡಿಕ್ರಿದಾರ ಸ್ಟ್ಯಾಂಪ್ ಶುಲ್ಕ ಕೊಡಲು ಬಾಧ್ಯಸ್ಥ, ಆದರೆ ದಂಡದ ನಿರ್ಧಾರ ಆಗದೆ ದಂಡ ಪಾವತಿಸಲಿ ಎಂದು ಅಪೇಕ್ಷಿಸುವಂತೆ ಇಲ್ಲ ಎಂಬ ವಿಷಯವನ್ನು ಡಿಕ್ರಿದಾರನ ವಕೀಲರು ನ್ಯಾಯದ ಗಮನಕ್ಕೆ ತಂದರು. ಶುಲ್ಕ ಮತ್ತು ದಂಡದ ಪಾವತಿಯನ್ನು ಒಂದೆ ಷರತ್ತಿನಲ್ಲಿ ಸೇರಿಸಿದ್ದರಿಂದ ಈ ಬಗ್ಗೆ ಡಿಕ್ರಿದಾರ ಗೊಂದಲಕ್ಕೆ ಒಳಗಾಗಿರುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ ಎಂಬ ನಿರ್ಣಯಕ್ಕೆ ನ್ಯಾಯಾಲಯ ಬರಲು ಡಿಕ್ರಿದಾರನ ಪರ ವಕೀಲರು ಒತ್ತಾಯಿಸಿ ವಾದಿಸಿದರು. ನ್ಯಾಯಪೀಠ ಈ ವಾದವನ್ನು ಒಪ್ಪಿತು. ದಂಡದ ಪಾವತಿಗೆ ನಿಷ್ಕರ್ಷೆ ಇಲ್ಲದೆ ಒತ್ತಾಯಿಸಿ ಜಾರಿ ಪಿಟಿಶನ್ನವನ್ನು ವಜಾ ಮಾಡಿದ್ದು ಡಿಕ್ರಿದಾರ ಮಾಡದೆ ಇದ್ದ ತಪ್ಪಿಗಾಗಿ ಶಿಕ್ಷಿಸಿದಂತೆ ಎಂಬ ಅಭಿಪ್ರಾಯಕ್ಕೆ ಬಂದು ವಜಾ ಆದ ಪಿಟಿಶನ್ನನ್ನು ಪುನರ್ ಸ್ಥಾಪಿಸಿತು. ಮುಂದೆ ವಿಧಿಸಲಾದ ಅವಧಿಯನ್ನು ಡಿಕ್ರಿದಾರ ಶುಲ್ಕ ಮತ್ತು ದಂಡ ಎರಡನ್ನೂ ಪಾವತಿಸಿ ಪಿಟಿಶನ್ನನ್ನು ಮುಂದುವರಿಸಬಹುದು ಎಂದು ಆದೇಶಿಸಿತು.

ಒಳ ಒಪ್ಪಂದ (sub letting) ಮಾಲೀಕನ ಬೆನ್ನ ಹಿಂದೆ ನಡೆದಾಗ ಆ ವಾಸ್ತವಾಂಶದ ಸಾಬೀತಿಗೆ ನೇರ ಸಾಕ್ಷಿ ಬೇಕಿಲ್ಲ. ಅದನ್ನು ಸಾಂದರ್ಭಿಕ ಸಾಕ್ಷ್ಯದಿಂದ ನ್ಯಾಯಾಲಯಕ್ಕೆ ಮನವರಿಕೆ ಮಾಡಬಹುದು ಎಂದಿದೆ, ಸರ್ವೋಚ್ಚ ನ್ಯಾಯಾಲಯ. ಬಾಡಿಗೆದಾರ ಮತ್ತೊಬ್ಬನೊಂದಿಗೆ ಗುಟ್ಟಾಗಿ ಒಳ ಒಪ್ಪಂದ ಮಾಡಿಕೊಂಡು, ಮಾಲೀಕನಿಗೆ ತಿಳಿಯದಂತೆ ಬಾಡಿಗೆ ಪಡೆಯುತ್ತಿದ್ದರೆ ಅಂತಹ ಸಂಬಂಧಕ್ಕೆ ನೇರ ಸಾಕ್ಷ್ಯ ಮಾಲೀಕನಿಗೆ ದೊರಕದು. ಬಾಡಿಗೆದಾರ ಮತ್ತು ಒಳ ಬಾಡಿಗೆದಾರ ಇಬ್ಬರೂ ಖಂಡಿತವಾಗಿ ಆ ಸಂಬಂಧವನ್ನು ನಿರಾಕರಿಸುತ್ತಾರೆ. ಇಂತಹ ಪ್ರಕರಣದಲ್ಲಿ ಸುತ್ತುವರೆದ ಸಂದರ್ಭ (surrounding circumstances)ಗಳಿಂದ ನ್ಯಾಯಾಲಯ ಸೂಕ್ತ ನಿರ್ಣಯಕ್ಕೆ ಬರಬಹುದಾಗಿದೆ ಎಂದಿದೆ ಈ ತೀರ್ಪು.

ಪ್ರಕಾಶಕರು : ಲಹರಿ ವಕೀಲರ ವೇದಿಕೆ, ನಂ. ೮/೩೪೦, ಪ್ರಭಾತ್ ಕಾಂಪ್ಲೆಕ್ಸ್, ಕೆ.ಜಿ.ರಸ್ತೆ,
ಬೆಂಗಳೂರು-೫೬೦ ೦೦೯
ಮುದ್ರಣ : ವೀ ಕೇ ಪ್ರಿಂಟರ್ಸ್ & ಪಬ್ಲಿಷರ್ಸ್, ನಂ. ೩೯೬, ಊಳಿಗಾ ಕಾಂಪ್ಲೆಕ್ಸ್, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು-೫೬೦ ೦೦೩ ಸಂಪರ್ಕಿಸಿ : aravindneglur@gmail.com
KARBIL 01707 / 10 /1/2009-TC
RNI No. KARBIL 2010/64911
ಸಂಪಾದಕರು : ಅರವಿಂದ ಎಂ. ನೆಗಳೂರ